KA / BG-GPO / 2515 / WPP-47 / 2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೫	ಬೆಂಗಳೂರು, ಗುರುವಾರ, ಸೆಪ್ಟೆಂಬರ್ ೨೩, ೨೦೧೦ (ಆಶ್ವಯುಜ ೧, ಶಕ ವರ್ಷ ೧೯೩೨)	ಸಂಚಿಕೆ ೩೮

ಭಾಗ – ೪ಎ

ರಾಜ್ಯದ ವಿಧೇಯಕಗಳ ಮತ್ತು ಅವುಗಳ ಮೇಲೆ ಪರಿಶೀಲನಾ ಸಮಿತಿಯ ವರದಿಗಳು, ರಾಜ್ಯದ ಅಧಿನಿಯಮಗಳು ಮತ್ತು ಅಧ್ಯಾದೇಶಗಳು, ಕೇಂದ್ರದ ಮತ್ತು ರಾಜ್ಯದ ಶಾಸನಗಳ ಮೇರೆಗೆ ರಾಜ್ಯ ಸರ್ಕಾರವು ಹೊರಡಿಸಿದ ಸಾಮಾನ್ಯ ಶಾಸನಬದ್ಧ ನಿಯಮಗಳು ಮತ್ತು ರಾಜ್ಯಾಂಗದ ಮೇರೆಗೆ ರಾಜ್ಯಪಾಲರು ಮಾಡಿದ ನಿಯಮಗಳು, ಹಾಗೂ ಕರ್ನಾಟಕ ಉಚ್ಚ ನ್ಯಾಯಾಲಯವು ಮಾಡಿದ ನಿಯಮಗಳು.

ಕಾರ್ಮಿಕ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಕಾಇ 54 ಎಲ್‌ಎಂಡಬ್ಲ್ಯೂ 2010, ಬೆಂಗಳೂರು, ದಿನಾಂಕ:30ನೇ ಆಗಸ್ಟ್, 2010

ಕರ್ನಾಟಕ ರಾಜ್ಯಾದ್ಯಂತ "ಅರೇಕನಟ್ [ಸುಪಾರಿ]" ಉದ್ದಿಮೆಯಲ್ಲಿನ ಯಾವುದೇ ಕೆಲಸದಲ್ಲಿ ತೊಡಗಿರುವ ಕಾರ್ಮಿಕರಿಗೆ ಕೆಳಕಂಡ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವಂತೆ ಕನಿಷ್ಟ ವೇತನವನ್ನು ಪರಿಷ್ಕರಿಸಲು ಸರ್ಕಾರವು ತೀರ್ಮಾನಿಸಿದೆ. ಕನಿಷ್ಟ ವೇತನ ಕಾಯ್ದೆ 1948ರ [ಕೇಂದ್ರಾಧಿನಿಯಮ ಸಂಖ್ಯೆ: (XI)] 3ನೇ ಪ್ರಕರಣದ 1ನೇ ಉಪ ಪ್ರಕರಣದ (ಬಿ) ಖಂಡದ ಮತ್ತು 5ನೇ ಪ್ರಕರಣದ (1) ನೇ ಉಪ ಪ್ರಕರಣದ (ಬಿ) ಖಂಡದಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಈ ಅಧಿಸೂಚನೆಯನ್ನು ಪ್ರಕಟಿಸಲಾಗಿದೆ. ಈ ಕರಡು ಪ್ರಸ್ತಾವನೆಯನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಿದ ದಿನಾಂಕದಿಂದ 2 ತಿಂಗಳ ಅವಧಿಯೊಳಗೆ ಭಾದಿತರಾಗುವ ವ್ಯಕ್ತಿಗಳಿಂದ ಸಲಹೆ/ಆಕ್ಷೇಪಣೆಗಳನ್ನು ಸ್ವೀಕರಿಸಲಾಗುವುದು. ತದನಂತರ ಬಂದ ಸಲಹೆ/ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ. ಸಲಹೆ/ಆಕ್ಷೇಪಣೆಗಳೇನಾದರು ಇದ್ದಲ್ಲಿ ಅದನ್ನು ಸರ್ಕಾರದ ಕಾರ್ಯದರ್ಶಿ, ಕಾರ್ಮಿಕ ಇಲಾಖೆ, ವಿಕಾಸ ಸೌಧ, ಬೆಂಗಳೂರು ಇವರಿಗೆ ಇಲ್ಲವೇ ಕಾರ್ಮಿಕ ಆಯುಕ್ತರು, ಕಾರ್ಮಿಕ ಭವನ, ಬನ್ನೇರುಘಟ್ಟ ರಸ್ತೆ, ಬೆಂಗಳೂರು–29 ಇಲ್ಲಿಗೆ ಸಲ್ಲಿಸಬಹುದಾಗಿರುತ್ತದೆ.

ಕನಿಷ್ಟ ವೇತನ ಕಾಯ್ದೆ 1948ರ ಅಧಿನಿಯಮ 3ನೇ ಪ್ರಕರಣದ 1ನೇ ಉಪ ಪ್ರಕರಣದ (ಬಿ) ಖಂಡದ ಮತ್ತು 5ನೇ ಪ್ರಕರಣದ (1)ನೇ ಉಪ ಪ್ರಕರಣದ (ಬಿ) ಖಂಡದ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಈ ಕೆಳಕಂಡ ಅನುಸೂಚಿಯಲ್ಲಿ ನಿರ್ಧಿಷ್ಟಪಡಿಸಿರುವಂತೆ, ಕರ್ನಾಟಕ ರಾಜ್ಯಾದ್ಯಾಂತ ಯಾವುದೇ " **ಅರೇಕನಟ್** [**ಸುಪಾರಿ**]" ಉದ್ದಿಮೆಯಲ್ಲಿನ ಯಾವುದೇ ಕೆಲಸದಲ್ಲಿ ತೊಡಗಿರುವ ಕಾರ್ಮಿಕ ವರ್ಗದವರಿಗೆ ವೇತನವನ್ನು ಪರಿಷ್ಕರಿಸಲು ಪ್ರಸ್ತಾಪಿಸಿದೆ.

ಅನುಸೂಚಿ

ಕ್ರ. ಸಂ.	ಕೆಲಸದ ವರ್ಗಗಳು	ತಿಂಗಳಿಗೆ ಕನಿಷ್ಠ ವೇತನ ದರಗಳು (ರೂಪಾಯಿ)
1	ವ್ಯಾನೇಜರ್	3915–00
2	ಅಕೌಂಟೆಂಟ್	3819–00
3	ಕ್ಲರ್ಕ್	3740–00
4	ಡ್ರೈವರ್	3755–00
5	ಅಟೆಂಡರ್	3577–00
6	ಅಡಿಕೆ ಪುಡಿ ಮಾಡುವವರು	
7	ಅಡಿಕೆ ಚೀಟಿ ಮಾಡುವವರು	
8	ಪ್ಯಾಕೆಟ್‌ಗಳಿಗೆ ಅಡಿಕೆಯನ್ನು ತುಂಬುವವರು/ಪ್ಯಾಕರ್ಸ್	
9	ಅಡಿಕೆ ಆರಿಸುವವರು/ಹೆಕ್ಕುವವರು	
10	ಅಡಿಕೆ ಪೊಟ್ಟಣಗಳನ್ನು ಎಣಿಸುವುದು	
11	ಅಡಿಕೆ ಹೊರುವುದು	
12	ಲೋಡಿಂಗ್ ಮತ್ತು ಅನ್ ಲೋಡಿಂಗ್	
13	ಅಡಿಕೆ ವಿಂಗಡಿಸುವುದು/ಸಾರ್ಟರ್ಸ್	
14	ಕ್ಲೀನರ್ಸ್ / ಸ್ವೀಪರ್ಸ್	
15	ಹಮಾಲರು	
16	ಕಟಿಂಗ್/ಮಿಕ್ಸಿಂಗ್	

ತುಟ್ಟಿಭತ್ಯೆ:

ಈ ಅಧಿಸೂಚನೆಯಲ್ಲಿ ಪ್ರಕಟಿಸಿರುವ ದರಗಳು ರಾಜ್ಯ ಸರಾಸರಿ ಗ್ರಾಹಕ ಬೆಲೆ ಸೂಚ್ಯಾಂಕ (1960–100) 3944 ಅಂಶಗಳಿಗೆ ವಿಲೀನಗೊಳಿಸಲಾಗಿದೆ. ರಾಜ್ಯ ಸರಾಸರಿ ಗ್ರಾಹಕ ಬೆಲೆ ಸೂಚ್ಯಾಂಕ 3944 ಅಂಶಗಳಿಗಿಂತ ಹೆಚ್ಚಾಗುವ ಪ್ರತಿ ಅಂಶಕ್ಕೆ ಎಲ್ಲಾ ವರ್ಗದ ಕಾರ್ಮಿಕರಿಗೆ ದಿನ ಒಂದಕ್ಕೆ 4 ಪೈಸೆಯಂತೆ ತುಟ್ಟಿಭತ್ಯೆ ನೀಡತಕ್ಕದ್ದು.

ಜೀವನ ನಿರ್ವಹಣಾ ತುಟ್ಟಿಭತ್ಯೆ ಲೆಕ್ಕಾಚಾರವನ್ನು ವರ್ಷಕ್ಕೊಮ್ಮೆ ಮಾಡಲಾಗುತ್ತದೆ. ಹಿಂದಿನ ಕ್ಯಾಲೆಂಡರ್ ವರ್ಷದ 12 ತಿಂಗಳುಗಳ ಗ್ರಾಹಕ ಬೆಲೆ ಸೂಚ್ಯಾಂಕಗಳ ಸರಾಸರಿ ಆಧಾರದ ಮೇಲೆ ಏಪ್ರಿಲ್ ಮೊದಲನೇ ದಿನಾಂಕದಂದು ಪ್ರತಿ ವರ್ಷ ಲೆಕ್ಕಾಚಾರ ಮಾಡತಕ್ಕದ್ದು. ಅಲ್ಲದೇ ಗ್ರಾಹಕ ಬೆಲೆ ಸೂಚ್ಯಾಂಕಗಳ ಸಂಖ್ಯೆಯ ವಾರ್ಷಿಕ ಸರಾಸರಿ ಆಧಾರದ ಮೇಲೆ ಹೆಚ್ಚುವರಿಯಾದ ಅಥವಾ ಕಡಿಮೆಯಾದ ಪ್ರಮಾಣವನ್ನು ಆಧರಿಸಿ ಲೆಕ್ಕ ಹಾಕಲಾಗುತ್ತದೆ. ಆದ್ದರಿಂದ ಮೊದಲ ಲೆಕ್ಕಾಚಾರವು ಗ್ರಾಹಕ ಬೆಲೆ ಸೂಚ್ಯಾಂಕದ (ಜನವರಿ 2010 ರಿಂದ ಡಿಸೆಂಬರ್ 2010)ರ ಸರಾಸರಿ ಆಧಾರದ ಮೇಲೆ 2011 ಎಪ್ರಿಲ್ 1ನೇ ತಾರೀಖಿನಿಂದ ಜಾರಿಗೆ ಬರುತ್ತದೆ.

1. ದಿನಗೂಲಿ ಗಳಿಕೆದಾರರ ಸಂದರ್ಭದಲ್ಲಿ ವೇತನದ ಮಾಸಿಕ ದರಗಳನ್ನು 26 ದಿನಗಳಿಂದ ವಿಭಾಗಿಸಿ, ನಾಲ್ಕು ರಜಾ ದಿನಗಳಿಗಾಗಿ ವೇತನವನ್ನು ನೀಡುವುದು ಸೇರಿದಂತೆ ಲೆಕ್ಕ ಹಾಕಲಾಗುವುದು.
2. ಕೆಲಸದ ಸ್ವರೂಪವು ಒಂದೇ ರೀತಿಯದಾಗಿರುವ ಸಂದರ್ಭದಲ್ಲಿ ಮಹಿಳಾ ಕಾರ್ಮಿಕರಿಗೆ ಪುರುಷ ಕಾರ್ಮಿಕರಿಗೆ ನೀಡುವ ವೇತನದ ದರಗಳನ್ನೇ ಸಂದಾಯ ಮಾಡತಕ್ಕದ್ದು.
3. ವೇತನ ಪಾವತಿಯಲ್ಲಿರುವ ದರವು ಹೆಚ್ಚಾಗಿದ್ದಲ್ಲಿ, ಆ ಹೆಚ್ಚಾಗಿರುವ ದರಗಳಲ್ಲಿ ವೇತನ ಸಂದಾಯ ಮಾಡುವುದನ್ನು ಮುಂದುವರೆಸತಕ್ಕದ್ದು.

4. ತುಂಡು ಆಧಾರದ ಮೇಲೆ ಕೆಲಸ ಮಾಡುವ ಕಾರ್ಮಿಕರ 8 ಗಂಟೆಗಳ ಕೆಲಸದ ವೇತನವು ಅದೇ ತರಹದ ಕೆಲಸ ಮಾಡುವ ಕಾರ್ಮಿಕರ ಒಂದು ದಿನದ ವೇತನಕ್ಕಿಂತ ಕಡಿಮೆ ಇರಕೂಡದು. ಒಂದು ದಿನದ ಕೆಲಸ ಎಂದರೆ 8 ಗಂಟೆಗಳ ಕೆಲಸ ಎಂದು ತಿಳಿಯತಕ್ಕದ್ದು. ಕಾರ್ಮಿಕರನ್ನು 8 ಗಂಟೆಗಿಂತ ಕಡಿಮೆ ಅವಧಿಯ ಕೆಲಸಕ್ಕೆ ನೇಮಿಸಿಕೊಂಡರೆ ವೇತನದ ಕೂಲಿಯ ಪ್ರಮಾಣವನ್ನು ಆ ವರ್ಗದ ದಿನದ ಅಥವಾ ತಿಂಗಳ ವೇತನದ ಆಧಾರದ ಮೇಲೆ ಲೆಕ್ಕ ಹಾಕುವುದು.
5. ಅಧಿಸೂಚನೆಯಲ್ಲಿ ಸೂಚಿಸದೇ ಇರುವ ವರ್ಗದವರಿಗೆ ಅದೇ ಸ್ವರೂಪದ ಉದ್ಯೋಗದ ಕಾರ್ಮಿಕರಿಗೆ ಕೊಡುವ ವೇತನವನ್ನು ಸಂದಾಯ ಮಾಡತಕ್ಕದ್ದು.
6. ವಾರದ ಅಥವಾ ಹಬ್ಬದ ದಿನಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಕನಿಷ್ಠ ವೇತನ ಕಾಯ್ದೆ 1948 ಮತ್ತು ನಿಯಮಗಳಿಗೆ ಒಳಪಟ್ಟು ಸಾಮಾನ್ಯ ವೇತನದ ಎರಡು ಪಟ್ಟು ವೇತನವನ್ನು ಕೊಡತಕ್ಕದ್ದು.
7. ಸಾಮಾನ್ಯ ಕೆಲಸದ ಅವಧಿಗಿಂತ ಮೀರಿದ ಕೆಲಸಕ್ಕೆ ಸಾಮಾನ್ಯ ದರಗಳ ಎರಡು ಪಟ್ಟು ವೇತನವನ್ನು ಕೊಡುವುದು.
8. ವೇತನ ಲೆಕ್ಕಾಚಾರದಲ್ಲಿ ಚಿಲ್ಲರೆ ಬಂದ ಪಕ್ಷದಲ್ಲಿ ಅದನ್ನು ಸಮೀಪದ 50 ಪೈಸೆಗೆ ಪೂರ್ಣಗೊಳಿಸುವುದು.
   (ಅ) ಕಿಶೋರಾವಸ್ಥೆ ಕಾರ್ಮಿಕರಿಗೆ ಅವರ ವರ್ಗದ 80 ಪ್ರತಿಶತ ವೇತನವನ್ನು ಕೊಡತಕ್ಕದ್ದು.
   (ಆ) ಅಪ್ರೆಂಟೀಸ್‌ಗಳಿಗೆ ಅವರ ವರ್ಗದ ವೇತನದ ಪ್ರತಿಶತ 75 ರಷ್ಟು ವೇತನವನ್ನು ಕೊಡತಕ್ಕದ್ದು.
   (ಇ) ಕಿಶೋರಾವಸ್ಥೆ ಎಂದರೆ 15 ವರ್ಷ ಮೀರಿದ, ಆದರೆ 18 ವರ್ಷದೊಳಗಿರುವ ವ್ಯಕ್ತಿ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಎನ್.ಆರ್. ಪ್ರಭು

ಪಿ.ಆರ್.813

ಸರ್ಕಾರದ ಅಧೀನ ಕಾರ್ಯದರ್ಶಿ,

ಕಾರ್ಮಿಕ ಇಲಾಖೆ.

ಜಲಸಂಪನ್ಮೂಲ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಜಸಂಇ:72:ಸೇಅವಿ:2010, ಬೆಂಗಳೂರು, ದಿನಾಂಕ:7ನೇ ಸೆಪ್ಟೆಂಬರ್, 2010

2005ರ ಮಾಹಿತಿ ಹಕ್ಕು ಅಧಿನಿಯಮ(2005ರ ಕೇಂದ್ರ ಕಾಯ್ದೆ22)ಸೆಕ್ಷನ್ 4(ಬಿ)(1)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಜಲಸಂಪನ್ಮೂಲ ಇಲಾಖೆಯ(ಬೃಹತ್ ಮತ್ತು ಮಧ್ಯಮ ನೀರಾವರಿ) ಸಚಿವಾಲಯಕ್ಕೆ ಸಂಬಂಧಿಸಿದಂತೆ ಸಾರ್ವಜನಿಕರ ಮಾಹಿತಿಗಾಗಿ ಪ್ರಕಟವಾದ ಕೈಪಿಡಿ ವಿವರ ಈ ಕೆಳಗಿನಂತಿರುತ್ತದೆ.

ಸಾಮಾನ್ಯ ಮಾಹಿತಿ:

ಭೌಗೋಳಿಕ ಕ್ಷೇತ್ರ:

ಕರ್ನಾಟಕ ರಾಜ್ಯ ಭೌಗೋಳಿಕ ವಿಸ್ತೀರ್ಣ 1,91,791 ಚ.ಕ.ಮೀ.ಗಳಿದ್ದು, ಇದು ರಾಷ್ಟ್ರದ ಶೇ. 5.83 ರಷ್ಟಿರುತ್ತದೆ. ರಾಜ್ಯದಲ್ಲಿ ಬೇಸಾಯಕ್ಕೆ ಯೋಗ್ಯವಾದ ಕ್ಷೇತ್ರ 1,40,598 ಚ.ಕಿ.ಮೀ.ಗಳಿದ್ದು, ಬೇಸಾಯವಾಗುತ್ತಿರುವ ಕ್ಷೇತ್ರ 1,07,000 ಚ.ಕಿ.ಮೀ.ಗಳಾಗಿರುತ್ತದೆ. ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳಿಂದ ಅಂತಿಮವಾಗಿ ಒಟ್ಟು 35,000 ಚ.ಕಿ.ಮೀ.ಗಳು ಅಥವಾ 35.00 ಲಕ್ಷ ಹೆಕ್ಟೇರುಗಳ ನೀರಾವರಿ ಸೌಲಭ್ಯ ಕಲ್ಪಿಸಲು ಉದ್ದೇಶಿಸಲಾಗಿದೆ.

ರಾಜ್ಯದ ಬೃಹತ್ ಮತ್ತು ಮಧ್ಯಮ ನೀರಾವರಿ ಯೋಜನೆಗಳ ಕಾರ್ಯಾನುಷ್ಠಾನಕ್ಕಾಗಿ ಕಾವೇರಿ ನದಿ ಕೊಳ್ಳ, ತುಂಗಭದ್ರಾ ಮೇಲ್ದಂಡೆ ಯೋಜನೆ, ನೀರಾವರಿ ಯೋಜನಾ ವಲಯ, ನೀರಾವರಿ ಕೇಂದ್ರ ವಲಯದ ಕೊಳ್ಳಗಳು ಮತ್ತು ಕೃಷ್ಣಾ ನದಿ ಕೊಳ್ಳ, ಯೋಜನೆಗಳನ್ನು ಕಾಲಮಿತಿಯೊಳಗೆ ಪೂರ್ಣಗೊಳಿಸುವ ಉದ್ದೇಶದಿಂದ ಮತ್ತು ಆ ಯೋಜನೆಗಳ ಉಸ್ತುವಾರಿ, ನಿರ್ವಹಣೆಗಾಗಿ ಪ್ರದೇಶವಾರು ಕ್ರಮವಾಗಿ ಕಾವೇರಿ ನೀರಾವರಿ ನಿಗಮ, ಕರ್ನಾಟಕ ನೀರಾವರಿ ನಿಗಮ, ಮತ್ತು ಕೃಷ್ಣಾ ಭಾಗ್ಯ ಜಲ ನಿಗಮ ಎಂಬ ಮೂರು ವಿಶೇಷ ಉದ್ದೇಶ ವಾಹಿನಿಗಳನ್ನು ಸ್ಥಾಪನೆ ಮಾಡಲಾಗಿದೆ (Special Purpose vehicle). ಇಲಾಖೆಯಲ್ಲಿ ಒಟ್ಟು 125 ಭಾರಿ ಮತ್ತು ನೀರಾವರಿ ಯೋಜನೆಗಳಿದ್ದು ಈ ಪೈಕಿ 47 ಯೋಜನೆಗಳು ಪೂರ್ಣಗೊಂಡಿರುತ್ತವೆ, 78 ಯೋಜನೆಗಳು ಪ್ರಗತಿಯ ವಿವಿಧ ಹಂತದಲ್ಲಿರುತ್ತವೆ. ಇದಲ್ಲದೆ ಜಲಸಂಪನ್ಮೂಲ ಇಲಾಖೆಯ ಪರಿವ್ಯಾಪ್ತಿಗೆ ಆರು ಜಲಾನಯನ ಪ್ರಾಧಿಕಾರಗಳು ಬರುತ್ತವೆ, ಅವುಗಳು ಯಾವುವೆಂದರೆ ತುಂಗಭದ್ರಾ ಯೋಜನೆ–ಮುನಿರಾಬಾದ್, ಮಲಪ್ರಭಾ

ಮತ್ತು ಘಟಪ್ರಭಾ ಯೋಜನೆ–ಬೆಳಗಾಂ, ಕಾವೇರಿ ಕೊಳ್ಳದ ಯೋಜನೆ–ಮೈಸೂರು, ಕೃಷ್ಣಾ ಮೇಲ್ದಂಡೆ ಯೋಜನೆ–ಭೀಮರಾಯನಗುಡಿ, ಭದ್ರಾ ಅಣೆಕಟ್ಟು ಯೋಜನೆ–ಶಿವಮೊಗ್ಗ, ನೀರಾವರಿ ಯೋಜನಾ ವಲಯ ಗುಲ್ಬರ್ಗಾ.

ಕಾವೇರಿ ನೀರಾವರಿ ನಿಗಮ ನಿಯಮಿತ:–

ಕಾವೇರಿ ನೀರಾವರಿ ನಿಗಮ ನಿಯಮಿತವನ್ನು ಕರ್ನಾಟಕದ ಕಾವೇರಿ ಜಲಾನಯನ ಯೋಜನೆಗಳಲ್ಲಿ ಕ್ಷಿಪ್ರಗತಿಯಲ್ಲಿ ಅನುಷ್ಠಾನಗೊಳಿಸುವ ವಿಶೇಷ ಉದ್ದೇಶಕ್ಕಾಗಿ ಕರ್ನಾಟಕ ಸರ್ಕಾರದಿಂದ ಕಂಪನಿಯ ಕಾಯ್ದೆಯಡಿಯಲ್ಲಿ ದಿನಾಂಕ: 03.06.2003 ರಂದು ಸ್ಥಾಪನೆಯಾಗಿದೆ. ಕರ್ನಾಟಕದ ಒಟ್ಟು ಭೌಗೋಳಿಕ ಪ್ರದೇಶವಾದ 1,91,791 ಚ.ಕಿ.ಮೀ.ನಲ್ಲಿ ಕಾವೇರಿ ಜಲಾನಯನ ಭೌಗೋಳಿಕ ಪ್ರದೇಶವು 34,275 ಚ.ಕಿ.ಮೀ. ಆವರಿಸಿದ್ದು, ಇದು ಶೇ.17.99 ಇರುತ್ತದೆ.

ಕಾವೇರಿ ನೀರಾವರಿ ನಿಗಮ ವ್ಯಾಪ್ತಿಗೆ ಬರುವ ನೀರಾವರಿ ಯೋಜನೆಗಳು ಈ ಕೆಳಕಂಡಂತಿವೆ:–

ಕ್ರ.ಸಂ.	ಪ್ರಗತಿಯಲ್ಲಿರುವ ಯೋಜನೆಗಳು	ಕ್ರ.ಸಂ.	ಪ್ರಗತಿಯಲ್ಲಿರುವ ಯೋಜನೆಗಳು
1.	ಕೃಷ್ಣರಾಜಸಾಗರ	11.	ಉಡುತೊರೆಹಳ್ಳ ಯೋಜನೆ
2.	ಕಬಿನಿ ಯೋಜನೆ	12.	ಇಗ್ಗಲೂರು ಯೋಜನೆ
3.	ಹಾರಂಗಿ ಯೋಜನೆ	13	ಮಂಚನಬೆಲೆ ಯೋಜನೆ
4.	ತಾರಕಾ ಯೋಜನೆ	14.	ಕೆ.ಆರ್.ಎಸ್.ಆಧುನೀಕರಣ
5.	ಬನ್ನಹಳ್ಳಿಹುಂಡಿ ಏತ ನೀರಾವರಿ ಯೋಜನೆ	15.	ಕಾಚೇನಹಳ್ಳಿ ಏತ ನೀರಾವರಿ ಯೋಜನೆ
6.	ಕಾಮ ಸಮುದ್ರ ಏತ ನೀರಾವರಿ ಯೋಜನೆ	16.	ವಾಟೆಹೊಳೆ ಯೋಜನೆ
7.	ಹುಚ್ಚನಕೊಪ್ಪ ಏತ ನೀರಾವರಿ ಯೋಜನೆ	17.	ಯಗಚಿ ಯೋಜನೆ
8.	ಡಿ.ಡಿ.ಅರಸ್ ನಾಲೆ	18.	ಅಣೆಕಟ್ಟು ಕಾಲುವೆಗಳು
9.	ಅರ್ಕಾವತಿ	19.	ನಂಜಾಪುರ ಏತ ನೀರಾವರಿ ಯೋಜನೆ
10.	ಹೇಮಾವತಿ ಯೋಜನೆ	ಹಾಗೂ ಪೂರ್ಣಗೊಂಡಿರುವ ಒಟ್ಟು 16 ಯೋಜನೆಗಳು	

ಕಾವೇರಿ ನೀರಾವರಿ ನಿಗಮ ನಿಯಮಿತದಡಿಯ ಮುಖ್ಯ ಇಂಜಿನಿಯರ್ ನೀರಾವರಿ(ದಕ್ಷಿಣ) ವಲಯ, ಮೈಸೂರು ಇವರ ವ್ಯಾಪ್ತಿಯಲ್ಲಿ ಬರುವ ಯೋಜನೆಗಳು:–

ಕ್ರ.ಸಂ.	ಯೋಜನೆಗಳು	ಕ್ರ.ಸಂ.	ಯೋಜನೆಗಳು
1.	ಡಿ.ಡಿ. ಅರಸ್ ನಾಲೆ	8.	ಇಗ್ಗಲೂರು ಯೋಜನೆ
2.	ಕಬಿನಿ ಯೋಜನೆ	9.	ಮಂಚನಬೆಲೆ ಯೋಜನೆ
3.	ಹಾರಂಗಿ ಯೋಜನೆ	10.	ಕೆ.ಆರ್.ಎಸ್. ಆಧುನೀಕರಣ
4.	ತಾರಕಾ ಯೋಜನೆ	11.	ನಂಜಾಪುರ ಏತ ನೀರಾವರಿ ಯೋಜನೆ
5.	ಅರ್ಕಾವತಿ	12.	ನುಗು
6.	ಚಿಕ್ಲಿಹೊಳೆ ಯೋಜನೆ	13.	ಬನಹಳ್ಳಿಹುಂಡಿ ಏತ ನೀರಾವರಿ ಯೋಜನೆ
7.	ಉಡುತೊರೆಹಳ್ಳ ಯೋಜನೆ	14.	ಅಣೆಕಟ್ಟು ನಾಲೆಗಳ ಆಧುನೀಕರಣ

ಮುಖ್ಯ ಇಂಜಿನಿಯರ್, ಹೇಮಾವತಿ ನಾಲಾ ವಲಯ, ತುಮಕೂರು, ಇವರ ವ್ಯಾಪ್ತಿಯಲ್ಲಿ ಬರುವ ಯೋಜನೆಗಳು:–

1. ತುಮಕೂರು ಶಾಖಾ ಕಾಲುವೆ
2. ಗೂಳೂರು–ಹೆಬ್ಬೂರು ಕುಡಿಯುವ ನೀರಿನ ಯೋಜನೆ
3. ಹೊನ್ನವಳ್ಳಿ ಕುಡಿಯುವ ನೀರಿನ ಯೋಜನೆ.

ಮುಖ್ಯ ಇಂಜಿನಿಯರ್, ಹೇಮಾವತಿ ಯೋಜನಾ ವಲಯ, ಗೊರೂರು, ಇವರ ವ್ಯಾಪ್ತಿಯಲ್ಲಿ ಬರುವ ಯೋಜನೆಗಳು:–

1. ಹೇಮಾವತಿ ಯೋಜನೆ

2. ಯಗಚಿ ಯೋಜನೆ
3. ಹುಚ್ಚನಕೊಪ್ಪಲು ಏತ ನೀರಾವರಿ ಯೋಜನೆ
4. ಕಾಮಸಮುದ್ರ ಏತ ನೀರಾವರಿ ಯೋಜನೆ
5. ಕಾಚೇನಹಳ್ಳಿ ಏತ ನೀರಾವರಿ ಯೋಜನೆ
6. ವಾಟೆಹೊಳೆ ಯೋಜನೆ

ಕೃಷ್ಣಾ ಭಾಗ್ಯ ಜಲನಿಗಮ ನಿಯಮಿತ:–

ಹೆಚ್ಚಿನ ಸಂಪನ್ಮೂಲಗಳನ್ನು ಕ್ರೋಢೀಕರಿಸಿ ಕೃಷ್ಣಾ ಮೇಲ್ದಂಡೆ ಯೋಜನೆಯ ಕೆಲಸಗಳನ್ನು ತ್ವರಿತವಾಗಿ ಕಾರ್ಯನುಷ್ಠಾನ ಗೊಳಿಸಲು 19.08.1994 ರಂದು ಕೃಷ್ಣಾ ಭಾಗ್ಯ ಜಲನಿಗಮವನ್ನು ಕಂಪನಿ ಕಾಯ್ದೆ 1956 ರಡಿ ಸ್ಥಾಪಿಸಲಾಗಿದೆ. ಕೃಷ್ಣಾ ಭಾಗ್ಯ ಜಲನಿಗಮವು ಕರ್ನಾಟಕ ಸರ್ಕಾರದ ಸಂಪೂರ್ಣ ಒಡೆತನದಲ್ಲಿದ್ದು, ಯೋಜನೆಗೆ ಅಗತ್ಯವಿರುವ ಎಲ್ಲಾ ಸಂಪನ್ಮೂಲಗಳನ್ನು, ಅಂದಾಜನ್ನು, ಯೋಜನೆಯನ್ನು, ತಪಾಸಣೆಯನ್ನು ಮತ್ತು ಕಾಲುವೆ ಉಸ್ತುವಾರಿ ಕೆಲಸಗಳನ್ನು ನೋಡಿಕೊಳ್ಳುತ್ತಿದೆ.

ಕೃಷ್ಣಾ ಭಾಗ್ಯ ಜಲನಿಗಮ ನಿಯಮಿತದ ವ್ಯಾಪ್ತಿಗೆ ಬರುವ ಯೋಜನೆಗಳು:

ಆಲಮಟ್ಟಿ ಎಡದಂಡೆ ಮತ್ತು ಬಲದಂಡೆ ಕಾಲುವೆ	ಚಿಮ್ಮಲಗಿ ಏತನೀರಾವರಿ ಯೋಜನೆ
ಚಂದಾಪುರ ಬ್ಯಾರೇಜ್(ಮಂಜ್ರಾ ನದಿಗೆ ಅಡ್ಡಲಾಗಿ)	ತಗ್ಗಿ ಸಿದ್ದಾಪುರ ಏತ ನೀರಾವರಿ ಯೋಜನೆ
ರಾಮಥಾಳ(ಮರೋಳ) ಏತನೀರಾವರಿ ಯೋಜನೆ	ಮುಳವಾಡ ಏತನೀರಾವರಿ ಹಂತ–3
ಸೊನ್ನ ಏತ ನೀರಾವರಿ ಯೋಜನೆ	ಇಂಡಿ ಏತನೀರಾವರಿ ಯೋಜನೆ
ತಿಮ್ಮಾಪುರ ಏತನೀರಾವರಿ ಯೋಜನೆ	ಬೋನಾಳ ಏತನೀರಾವರಿ ಯೋಜನೆ
ರಾಜನ್‌ಕೊಳ್ಳೂರ ಏತ ನೀರಾವರಿ ಯೋಜನೆ	ನಂದವಾಡಗಿ ಏತನೀರಾವರಿ ಯೋಜನೆ
ನಾರಾಯಣಪುರ ಬಲದಂಡೆ ಕಾಲುವೆ	

ಮುಖ್ಯ ಇಂಜಿನಿಯರ್ ಕೃಷ್ಣಾ ಭಾಗ್ಯ ಜಲನಿಗಮ, ಕಾಲುವೆ ವಲಯ–1, ಭೀಮರಾಯನಗುಡಿ ಇವರ ವ್ಯಾಪ್ತಿಯಲ್ಲಿ ಬರುವ ಯೋಜನೆಗಳು:–

1. ಕೃಷ್ಣಾ ಮೇಲ್ದಂಡೆ ಯೋಜನೆಯಡಿ ಬರುವ ನಾರಾಯಣಪುರ ಬಲದಂಡೆ ಕಾಲುವೆ(ಕಿ.ಮೀ. 82.00 ರಿಂದ 95.00 ಹಾಗೂ ವಿತರಣಾ ಕಾಲುವೆ ಸಂ.15 ರಿಂದ 18), ಜೇವರ್ಗಿ ಶಾಖಾ ಕಾಲುವೆ, ಶಹಾಪುರ ಶಾಖಾ ಕಾಲುವೆ ಹಾಗೂ ಮುದಬಾಳ ಶಾಖಾ ಕಾಲುವೆ.
2. ನಾರಾಯಣಪುರ ಬಲದಂಡೆ ಕಾಲುವೆ ವಿತರಣಾ ಕಾಲುವೆ ಸಂ.9(ಎ).
3. ಭೀಮಾ ನದಿಗೆ ಅಡ್ಡಲಾಗಿ ಬ್ಯಾರೇಜುಗಳು.:
   (ಅ) ಯಾದಗಿರ್ ಬ್ರಿಡ್ಜ್–ಕಂ–ಬ್ಯಾರೇಜ್
   (ಆ) ಜೋಳದಡಗಿ–ಗುಡೂರ್ ಬ್ಯಾರೇಜ್.
   (ಇ) ಸನ್ನತಿ ಏತ ನೀರಾವರಿ ಯೋಜನೆ.
4. ಮಂಜ್ರಾ ನದಿಗೆ ಅಡ್ಡಲಾಗಿ 4 ಸರಣಿ ಬ್ಯಾರೇಜುಗಳ ನಿರ್ಮಾಣ.
5. ಕೃಷ್ಣಾ ನದಿಗೆ ಅಡ್ಡಲಾಗಿ ಗೂಗಲ್ ಬ್ರಿಡ್ಜ್–ಕಂ–ಬ್ಯಾರೇಜ್.
6. ಮಲ್ಲಾಬಾದ್ ಏತ ನೀರಾವರಿ ಯೋಜನೆ.

ಮುಖ್ಯ ಇಂಜಿನಿಯರ್, ಕೃಭಾಜನಿನಿ, ಕಾಲುವೆ ವಲಯ–2, ಕೆಂಭಾವಿ ಇವರ ವ್ಯಾಪ್ತಿಯಲ್ಲಿ ಬರುವ ಯೋಜನೆಗಳು:–

1. ಕೃಷ್ಣಾ ಮೇಲ್ದಂಡೆ ಯೋಜನೆಯಡಿ ಬರುವ ಇಂಡಿ ಶಾಖಾ ಕಾಲುವೆ ಹಾಗೂ ಇಂಡಿ ಏತನೀರಾವರಿ ಯೋಜನೆ.
2. ಇಂಡಿ ಏತ ನೀರಾವರಿ(ಗುತ್ತಿ ಬಸವಣ್ಣ) ಕಿ.ಮೀ. 97.30 ರಿಂದ 128.00
3. ಇಟಗಾ–ಸಂಗಮ ಏತ ನೀರಾವರಿ ಯೋಜನೆ.
4. ಭೀಮಾ ನದಿಗೆ ಅಡ್ಡಲಾಗಿ ಘತ್ತರಗಾ ಹಾಗೂ ಕಲ್ಲೂರು–ಬಿ ಬ್ಯಾರೇಜುಗಳು.

ಮುಖ್ಯ ಇಂಜಿನಿಯರ್, ಕೃಭಾಜನಿನಿ, ಅಣೆಕಟ್ಟು ವಲಯ, ಆಲಮಟ್ಟಿ ಇವರ ವ್ಯಾಪ್ತಿಯಲ್ಲಿ ಬರುವ ಯೋಜನೆಗಳು:–

1. ಕೃಷ್ಣಾ ಮೇಲ್ದಂಡೆ ಯೋಜನೆಯಡಿ ಬರುವ ಆಲಮಟ್ಟಿ ಅಣೆಕಟ್ಟು, ಆಲಮಟ್ಟಿ ಎಡ ಮತ್ತು ಬಲದಂಡೆ ಕಾಲುವೆ ಹಾಗೂ ಮುಳವಾಡ ಏತ ನೀರಾವರಿ ಯೋಜನೆ.
2. ಚಿಮ್ಮಲಗಿ ಏತ ನೀರಾವರಿ ಯೋಜನೆ.
3. ರಾಮಥಾಳ (ಮರೋಳ) ಏತ ನೀರಾವರಿ ಯೋಜನೆ.
4. ತಿಮ್ಮಾಪುರ ಏತ ನೀರಾವರಿ ಯೋಜನೆ.
5. ತೆಗ್ಗಿ –ಸಿದ್ದಾಪುರ ಏತ ನೀರಾವರಿ ಯೋಜನೆ.
6. ಸೊನ್ನ ಹಾಗೂ ರೊಳ್ಳಿ–ಮನ್ನಿಕೇರಿ ಏತ ನೀರಾವರಿ ಯೋಜನೆ.
7. ಬಿಜಾಪುರ ಹಾಗೂ ಬಾಗಲಕೋಟೆ ಜಿಲ್ಲೆಗಳಡಿ ಕೆರೆ ತುಂಬುವ ಯೋಜನೆ.
8. ಬಿಜಾಪುರ ಜಿಲ್ಲೆಯ ಇಂಡಿ ತಾಲ್ಲೂಕಿನಡಿ ಕೆರೆ ತುಂಬುವ ಯೋಜನೆ.

ಮುಖ್ಯ ಇಂಜಿನಿಯರ್, ಕೃಭಾಜನಿನಿ, ಕಾ ಮತ್ತು ನಿ ವಲಯ, ನಾರಾಯಣಪುರ ಇವರ ವ್ಯಾಪ್ತಿಯಲ್ಲಿ ಬರುವ ಯೋಜನೆಗಳು

1. ಕೃಷ್ಣಾ ಮೇಲ್ದಂಡೆ ಯೋಜನೆಯಡಿ ಬರುವ ನಾರಾಯಣಪುರ ಅಣೆಕಟ್ಟು, ನಾರಾಯಣಪುರ ಎಡದಂತೆ ಕಾಲುವೆ, ನಾರಾಯಣಪುರ ಬಲದಂಡೆ ಕಾಲುವೆ (ಕಿ.ಮೀ.0.00 ರಿಂದ 82.00 ಹಾಗೂ ವಿತರಣಾ ಕಾಲುವೆ ಸಂ. 1 ರಿಂದ 14) ಮತ್ತು ರಾಂಪುರ ಏತ ನೀರಾವರಿ ಯೋಜನೆ.
2. ರಾಜನ್‌ಕೊಳ್ಳೂರ ಏತ ನೀರಾವರಿ ಯೋಜನೆ.
3. ಬೋನಾಳ್ ಏತ ನೀರಾವರಿ ಯೋಜನೆ.

ಕರ್ನಾಟಕ ನೀರಾವರಿ ನಿಗಮ ನಿಯಮಿತ:–

ಸರ್ಕಾರದ ಆದೇಶ ಸಂಖ್ಯೆ: ನೀಇ 201 ಕೆಬಿಎನ್ 98, ದಿ:26.11.98 ರಲ್ಲಿ ಕರ್ನಾಟಕ ನೀರಾವರಿ ನಿಗಮ ನಿಯಮಿತವನ್ನು ಕೃಷ್ಣಾ ಕಣಿವೆ / ಕೊಳ್ಳದ, ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ಹೊರತುಪಡಿಸಿ ಉಳಿದ ಎಲ್ಲಾ ಯೋಜನೆಗಳನ್ನು ಅನುಷ್ಠಾನಗೊಳಿಸಲು ರಚಿಸಲಾಯಿತು. ಈ ನಿಗಮವು 9ನೇ ಡಿಸೆಂಬರ್ 1998 ರಿಂದ ಕಾರ್ಯಾರಂಭಿಸಿದೆ.

ಕರ್ನಾಟಕ ನೀರಾವರಿ ನಿಗಮ ನಿಯಮಿತದಡಿಯಲ್ಲಿ ಬರುವ ನೀರಾವರಿ ಯೋಜನೆಗಳು:–

1. ತುಂಗಾ ಮೇಲ್ದಂಡೆ ಯೋಜನೆ (ಶಿವಮೊಗ್ಗ)
2. ಭದ್ರಾ ಮೇಲ್ದಂಡೆ ಯೋಜನೆ (ಚಿತ್ರದುರ್ಗ)
3. ವರಾಹಿ ಯೋಜನೆ ಸಿದ್ದಾಪುರ
4. ಮಾರ್ಕಂಡೇಯ ಯೋಜನೆ (ನೀರಾವರಿ ಉತ್ತರ ಬೆಳಗಾಂ)
5. ಕಳಸಾ ನಾಲಾ ಯೋಜನೆ (ನೀರಾವರಿ ಉತ್ತರ ಬೆಳಗಾಂ)
6. ಹಿಪ್ಪರಗಿ ಯೋಜನೆ (ನೀರಾವರಿ ಉತ್ತರ ಬೆಳಗಾಂ)
7. ಬಸಾಪುರ ಏತ ನೀರಾವರಿ ಯೋಜನೆ (ಶಿವಮೊಗ್ಗ)
8. ಇಟಗಿ–ಸಾಸಲವಾಡ ಏತ ನೀರಾವರಿ ಯೋಜನೆ (ತುಂ.ಮೇ.ಯೋ.ಶಿವಮೊಗ್ಗ)
9. ದಡ್ಡಿ ನಾಗನೂರ ಏತ ನೀರಾವರಿ ಯೋಜನೆ (ನೀರಾವರಿ ಉತ್ತರ ಬೆಳಗಾಂ)
10. ಅಮರ್ಜಾ ಯೋಜನೆ (ಗುಲ್ಬರ್ಗಾ)
11. ಸಿಂಗಟಾಲೂರು ಏತನೀರಾವರಿ ಯೋಜನೆ (ನೀರಾವರಿ ಕೇಂದ್ರ ವಲಯ ಮುನಿರಾಬಾದ್)
12. ರಾಜನಹಳ್ಳಿ ಏತ ನೀರಾವರಿ ಯೋಜನೆ (ತುಂ.ಮೇ.ಯೋ.ಶಿವಮೊಗ್ಗ)
13. ಭದ್ರಾ ನಾಲಾ ಆಧುನೀಕರಣ
14. ಉಬ್ರಾಣಿ ಅಮೃತಾಪುರ ಏತ ನೀರಾವರಿ ಯೋಜನೆ (ತುಂ.ಮೇ.ಯೋ.ಶಿವಮೊಗ್ಗ)
15. ಸನ್ಯಾಸಿ ಕೊಪ್ಪ ಏತನೀರಾವರಿ ಯೋಜನೆ
16. ಘಟಪ್ರಭಾ ಯೋಜನೆ (ನೀರಾವರಿ ಉತ್ತರ ವಲಯ)
17. ದೂಧಗಂಗಾ ನೀರಾವರಿ ಯೋಜನೆ
18. ಹಿರಣ್ಯಕೇಶಿ ನದಿಯಿಂದ ಘಟಪ್ರಭ ಬಲದಂಡೆ ಕಾಲುವೆಗೆ ನೀರೆತ್ತುವುದು.

19. ಬಳ್ಳಾರಿ ನಾಲಾ ಯೋಜನೆ (ನೀರಾವರಿ ಉತ್ತರ ವಲಯ)
20. ಶ್ರೀ ರಾಮೇಶ್ವರ ಏತ ನೀರಾವರಿ ಯೋಜನೆ
21. ಕಿನಾಯೇ ಯೋಜನೆ (ನೀರಾವರಿ ಉತ್ತರ ವಲಯ)
22. ಮಲಪ್ರಭಾ ಯೋಜನೆ
23. ಹರಿನಾಲಾ ನೀರಾವರಿ ಯೋಜನೆ
24. ಬೆಣ್ಣೆಹಳ್ಳ ಏತನೀರಾವರಿ ಯೋಜನೆ (ಧಾರವಾಡ)
25. ಜವಳಹಳ್ಳ ಏತನೀರಾವರಿ ಯೋಜನೆ (ಧಾರವಾಡ)
26. ಕೊಳಚಿ ಏತನೀರಾವರಿ ಯೋಜನೆ (ಧಾರವಾಡ)
27. ಕೊಣ್ಣೂರು ಏತನೀರಾವರಿ ಯೋಜನೆ (ಧಾರವಾಡ)
28. ಶಿಗ್ಗಾಂವಿ ಏತನೀರಾವರಿ ಯೋಜನೆ (ಧಾರವಾಡ)

ಮುಖ್ಯ ಇಂಜಿನಿಯರ್, ನೀರಾವರಿ(ಉ)ವಲಯ, ಬೆಳಗಾವಿ, ಇವರ ವ್ಯಾಪ್ತಿಯಲ್ಲಿ ಬರುವ ಯೋಜನೆಗಳು:–

1. ಘಟಪ್ರಭಾ
2. ಹಿಪ್ಪರಗಿ
3. ಮಾರ್ಕಂಡೇಯ ಜಲಾಶಯ ಯೋಜನೆ
4. ದೂಧಗಂಗಾ
5. ಹಿರಣ್ಯಕೇಶಿ ನದಿಯಿಂದ ಘಟಪ್ರಭ ಬಲದಂಡೆ ಕಾಲುವೆಗೆ ನೀರೆತ್ತುವುದು
6. ಬಳ್ಳಾರಿ ನಾಲಾ ಯೋಜನೆ
7. ಶ್ರೀ ರಾಮೇಶ್ವರ ಏತ ನೀರಾವರಿ ಯೋಜನೆ
8. ಕಿನಾಯೇ ಯೋಜನೆ

ಮುಖ್ಯ ಇಂಜಿನಿಯರ್, ಮಲಪ್ರಭಾ ಯೋಜನಾ ವಲಯ, ಧಾರವಾಡ ಇವರ ವ್ಯಾಪ್ತಿಯಲ್ಲಿ ಬರುವ ಯೋಜನೆಗಳು:–

1. ಮಲಪ್ರಭಾ
2. ಹರಿನಾಲಾ ಕಳಸಾ ನಾಲಾ ಮತ್ತು ಬಂಡೂರಿನಾಲಾ ಯೋಜನೆಗಳು
3. ಜವಳಹಳ್ಳ ಏತ ನೀರಾವರಿ ಯೋಜನೆ
4. ಬೆಣ್ಣೆಹಳ್ಳ ಏತ ನೀರಾವರಿ ಯೋಜನೆಗಳು
5. ಕೊಳಚಿ ಏತ ನೀರಾವರಿ ಯೋಜನೆ
6. ಕೊಣ್ಣೂರು ಏತ ನೀರಾವರಿ ಯೋಜನೆ
7. ಶಿಗ್ಗಾಂವ್ ಏತ ನೀರಾವರಿ

ಮುಖ್ಯ ಇಂಜಿನಿಯರ್, ತುಂಗಾ ಮೇಲ್ದಂಡೆ ಯೋಜನೆ, ಶಿವಮೊಗ್ಗ, ಇವರ ವ್ಯಾಪ್ತಿಯಲ್ಲಿ ಬರುವ ಯೋಜನೆಗಳು:–

1. ತುಂಗಾ ಮೇಲ್ದಂಡೆ ಯೋಜನೆ
2. ತುಂಗಾ ಏತನೀರಾವರಿ ಯೋಜನೆ
3. ಬಸಾಪುರ ಏತ ನೀರಾವರಿ ಯೋಜನೆ
4. ಇಟಗಿ–ಸಾಸಲವಾಡ ಏತನೀರಾವರಿ ಯೋಜನೆ
5. ಭದ್ರಾ ನಾಲೆಗಳ ಆಧುನೀಕರಣ ಗುಡ್ಡದಮಲ್ಲಾಪುರ ಏತ ನೀರಾವರಿ ಯೋಜನೆ
6. ಉಬ್ರಾಣಿ–ಅಮೃತಾಪುರ ಸಂಯುಕ್ತ ಏತನೀರಾವರಿ ಯೋಜನೆ
7. ಸನ್ಯಾಸಿ ಕೊಪ್ಪ ಏತನೀರಾವರಿ ಯೋಜನೆ
8. ದಂಡಾವತಿ ಯೋಜನೆ
9. ಕಲ್ಲುವಡ್ಡಹಳ್ಳ ಕೆರೆ
10. ತಿಳುವಳ್ಳಿ ಏತ ನೀರಾವರಿ ಯೋಜನೆ
11. ರಾಜನಹಳ್ಳಿ ಏತನೀರಾವರಿ(ದಾವಣಗೆರೆ 22 ಕೆರೆಗಳು)

ಮುಖ್ಯ ಇಂಜಿನಿಯರ್, ಭದ್ರಾ ಮೇಲ್ದಂಡೆ ಯೋಜನಾ ವಲಯ, ಚಿತ್ರದುರ್ಗ, ಇವರ ವ್ಯಾಪ್ತಿಯಲ್ಲಿ ಬರುವ ಯೋಜನೆಗಳು:–

ಭದ್ರಾ ಮೇಲ್ದಂಡೆ ಯೋಜನೆ ಹಂತ–1 ಮತ್ತು 2

(ಮುಖ್ಯ ಇಂಜಿನಿಯರ್, ವರಾಹಿ ಯೋಜನಾ ವಲಯ, ಸಿದ್ದಾಪುರ, ಇವರ ವ್ಯಾಪ್ತಿಯಲ್ಲಿ ಬರುವ ಯೋಜನೆಗಳು – ವರಾಹಿ ಯೋಜನೆ)

ನಿಗಮಗಳ ವ್ಯಾಪ್ತಿಗೆ ಹೊರತುಪಡಿಸಿ ಸರ್ಕಾರದ ನಿಯಂತ್ರಣಕ್ಕೆ ಬರುವ ಯೋಜನೆಗಳು / ಕಾಡಾ ಪ್ರಾಧಿಕಾರಗಳು ಮತ್ತು ಆ ಯೋಜನೆಗಳ ಕಾರ್ಯ ವ್ಯಾಪ್ತಿಯನ್ನು ಹೊಂದಿರುವ ಮುಖ್ಯ ಇಂಜಿನಿಯರ್‌ಗಳ ವಿವರ:

1. **ಮುಖ್ಯ ಇಂಜಿನಿಯರ್, ನೀರಾವರಿ ಕೇಂದ್ರ ವಲಯ, ಮುನಿರಾಬಾದ್, ಇವರ ವ್ಯಾಪ್ತಿಯಲ್ಲಿ ಬರುವ ಯೋಜನೆಗಳು:–**
    1. ತುಂಗಭದ್ರಾ ಎಡದಂಡೆ ಕಾಲುವೆ ಮತ್ತು ವಿತರಣೆ ಕಾಲುವೆಗಳ ಆಧುನೀಕರಣ ಯೋಜನೆ.
    2. ತುಂಗಭದ್ರಾ ಬಲದಂಡೆ ವಿಜಯನಗರ ಕಾಲುವೆ(ಮೇಲ್ಮಟ್ಟ – ಕೆಳಮಟ್ಟ)
    3. ಸಿಂಗಟಾಲೂರು ಏತ ನೀರಾವರಿ ಯೋಜನೆ
2. **ಮುಖ್ಯ ಇಂಜಿನಿಯರ್, ನೀರಾವರಿ ಯೋಜನಾ ವಲಯ, ಗುಲ್ಬರ್ಗಾ, ಇವರ ವ್ಯಾಪ್ತಿಯಲ್ಲಿ ಬರುವ ಯೋಜನೆಗಳು:**
    1. ಬೆಣ್ಣೆತೋರಾ ಯೋಜನೆ
    2. ಭೀಮಾ ಏತ ನೀರಾವರಿ ಯೋಜನೆ
    3. ಗಂಡೋರಿನಾಲಾ ಯೋಜನೆ
    4. ಕೆಳದಂಡೆ ಮುಲ್ಲಾಮಾರಿ ಯೋಜನೆ
    5. ಅಮರ್ಜಾ ಯೋಜನೆ

ಕಾಡಾ ಪ್ರಾಧಿಕಾರಗಳು:–

ಸೃಜಿಸಿರುವ ನೀರಾವರಿ ಸಾಮರ್ಥ್ಯವನ್ನು ಮತ್ತು ಸಣ್ಣ ಹಂತದ ಮೂಲ ಸೌಕರ್ಯ ಹಾಗೂ ನೀರಿನ ದಕ್ಷ ನಿರ್ವಹಣೆಯ ಉದ್ದೇಶದಿಂದ ಕೃಷಿ ಉತ್ಪಾದನೆ ಮತ್ತು ಉತ್ಪಾದಕತೆ ಮತ್ತು ರೈತರ ಆರ್ಥಿಕ ಸಾಮಾಜಿಕ ಸ್ಥಿತಿಗತಿಗಳನ್ನು ಉತ್ತಮಗೊಳಿಸಲು ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಕಾರ್ಯಕ್ರಮವನ್ನು 1974 ರಲ್ಲಿ ಪ್ರಾರಂಭಿಸಲಾಯಿತು. ರಾಜ್ಯದಲ್ಲಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರಗಳನ್ನು ಪ್ರಾರಂಭಿಸಿರುವುದನ್ನು ಮತ್ತು ಪ್ರತಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ ದಲ್ಲಿ ಒಳಗೊಳ್ಳುವ ಯೋಜನೆಗಳು ಈ ಕೆಳಕಂಡಂತಿದೆ:

ಕ್ರ. ಸಂ.	ಅಚ್ಚುಕಟ್ಟು ಪ್ರದೇಶಾಭಿವೃದ್ಧಿಯ ಹೆಸರು	ಪ್ರಾರಂಭಗೊಂಡ ವರ್ಷ	ಪ್ರದೇಶದಲ್ಲಿ ಬರುವ ಜಮೀನುಗಳು ಮತ್ತು ನೀರಾವರಿ ಯೋಜನೆಗಳಿಂದ ಪ್ರಯೋಜನಗೊಂಡ ಜಮೀನುಗಳು
1	ತುಂಗಭದ್ರಾ ಯೋಜನೆ– ಮುನಿರಾಬಾದ್	1974	ತುಂಗಭದ್ರಾ ಸೇರಿದಂತೆ ಇತರೆ ಸಂಬಂಧಿಸಿದ ಯೋಜನೆಗಳು – ವಿಜಯನಗರ ಕಾಲುವೆಗಳು, ಮಸ್ಕಿನಾಳಾ, ಹಿರೇಹಳ್ಳ, ಹಗರಿ ಬೊಮ್ಮನಹಳ್ಳಿ, ಕನಕನಾಲಾ, ನಾರಿಹಳ್ಳ, ರಾಜೋಲಿಬಂಡ, ಸಿಂಗಟಾಲೂರು, ವೈ.ಕಗ್ಗಲ್ ಏತನೀರಾವರಿ ಯೋಜನೆ, ಕಂದನಗುಡ್ಡ ಏತ ನೀರಾವರಿ ಯೋಜನೆ.
2	ಮಲಪ್ರಭಾ ಮತ್ತು ಘಟಪ್ರಭಾ ಯೋಜನೆ – ಬೆಳಗಾಂ	1974	ಮಲಪ್ರಭಾ ಸೇರಿದಂತೆ ಸಂಬಂಧಿಸಿದ ಯೋಜನೆಗಳು ಮತ್ತು ಘಟಪ್ರಭಾ ಸೇರಿದಂತೆ ಸಂಬಂಧಿಸಿದ ಯೋಜನೆಗಳು – ಕಲ್ಲಿ ವೇರ್, ದೂಧಗಂಗಾ, ಹಿಪ್ಪರಗಿ, ಮಾರ್ಕಂಡೇಯ, ಹರಿನಾಲ, ಮಹಾದಾಯಿ ತಿರುವು, ಕಳಸನಾಲಾ, ಬಂಡೂರಿನಾಲ, ಗೋಕಾಕ್ ಕಾಲುವೆ.
3	ಕಾವೇರಿ ಕೊಳ್ಳದ ಯೋಜನೆ – ಮೈಸೂರು	1974	ಕೃಷ್ಣ ರಾಜ ಸಾಗರ ಮತ್ತು ಸಂಬಂಧಿಸಿದ ಯೋಜನೆಗಳು – ನುಗು, ಭೈರಮಂಗಲ, ಚಿಕ್ಕಹೊಳೆ, ತಾರಕ, ಗುಂಡಲ್, ಹೆಬ್ಬಳ್ಳ, ಕಣ್ವ, ಮಂಗಳ, ಮಾರ್ಕೋನಹಳ್ಳಿ, ನಲ್ಲೂರು, ಅಮಾನಿಕೆರೆ, ಸುವರ್ಣಾವತಿ, ಹಾರಂಗಿ, ಹೇಮಾವತಿ, ಕಬಿನಿ, ಯಗಚಿ, ಅರ್ಕಾವತಿ, ಚಿಕ್ಲಿಹೊಳೆ, ಇಗ್ಗಲೂರು, ಮಂಚನಬೆಲೆ, ಉಡು ತೊರೆಹಳ್ಳ, ವಾಟೆಹೊಳೆ, ಕಾಮಸಮದ್ರ

ಕ್ರ. ಸಂ.	ಅಚ್ಚುಕಟ್ಟು ಪ್ರದೇಶಾಭಿವೃದ್ಧಿಯ ಹೆಸರು	ಪ್ರಾರಂಭಗೊಂಡ ವರ್ಷ	ಪ್ರದೇಶದಲ್ಲಿ ಬರುವ ಜಮೀನುಗಳು ಮತ್ತು ನೀರಾವರಿ ಯೋಜನೆಗಳಿಂದ ಪ್ರಯೋಜನಗೊಂಡ ಜಮೀನುಗಳು
			ಏತನೀರಾವರಿ, ಹುಂಚನಕೊಪ್ಪಲು ಏತನೀರಾವರಿ, ಪುರಿಗಾಲಿ ಏತನೀರಾವರಿ, ನಂಜಾಪುರ ಏತನೀರಾವರಿ ಯೋಜನೆ, ಶಿಂಷಾ ಆಧುನೀಕರಣ ಬದಲನವಾಳು ಏತ ನೀರಾವರಿ ಯೋಜನೆ, ಬನ್ನಹಳ್ಳಿ ಏತ ನೀರಾವರಿ ಯೋಜನೆ, ಕಾಂಚನಹಳ್ಳಿ ಏತನೀರಾವರಿ ಯೋಜನೆ, ನುಗು ಏತನೀರಾವರಿ ಯೋಜನೆ, ತೀತ, ಅಣೆಕಟ್ಟು ಕಾಲುವೆ ಚಂಗವಾಡಿ, ಕೃಷ್ಣರಾಜ ಸಾಗರ ವಿಸ್ತರಣೆ, ಲಕ್ಷ್ಮಣತೀರ್ಥ, ಲೋಕಪವನಿ ದೇವರಾಜ್ ಅರಸ್ ಕಾಲುವೆ, ಕೃಷ್ಣರಾಜಸಾಗರ ಆಧುನೀಕರಣ.
4	ಕೃಷ್ಣಾ ಮೇಲ್ದಂಡೆ ಯೋಜನೆ–ಮೈಸೂರು	1977	ಕೃಷ್ಣಾ ಮೇಲ್ದಂಡೆ ಮತ್ತು ಸಂಬಂಧಿಸಿದ ಯೋಜನೆಗಳು – ರಾಮತಲ ಏತನೀರಾವರಿ
5	ಭದ್ರಾ ಅಣೆಕಟ್ಟು ಯೋಜನೆ – ಶಿವಮೊಗ್ಗ.	1979	ವಾಣಿವಿಲಾಸ ಸಾಗರ, ಭದ್ರಾ, ಭದ್ರಾ ಅಣೆಕಟ್ಟು(ಗೊಂಡಿ), ರಾಣೀಕೆರೆವರೆಗಿನ ನೀರುಣಿಸುವ ಕಾಲುವೆ, ಬಸಾಪುರ ಏತನೀರಾವರಿ, ಹೊಡಿರಾಯನಹಳ್ಳ, ಇಟಗಿ ಸಾಸಲವಾಡ ಏತನೀರಾವರಿ, ಭದ್ರಾ ಮೇಲ್ದಂಡೆ, ಜಂಬದಹಳ್ಳ, ತುಂಗಾ ಅಣೆಕಟ್ಟು, ತುಂಗಾ ಮೆಲ್ದಂಡೆ, ಅಂಬಿಲಿಗೋಳ, ಅಂಜನಾಪುರ, ನಾರಾಯಣಪುರ, ವಾರಾಹಿ, ಸ್ವರ್ಣ, ಗುರುಪುರ, ಕಾಳಿನದಿ, ಕಲ್ಲೂರು, ಮುಲ್ಕಿ, ನೀರಿಹೊಳೆ, ಪಾಯಸವಾಣಿ, ಶಲ್‌ಮಲ, ಶರಾವತಿ, ಧರ್ಮ, ಬಾಚಂಕಿ, ನೇತ್ರಾವತಿ, ಮಗದ್ ಮಸೂರ್, ಗಾಯತ್ರಿ, ಭೀಮಸಮುದ್ರ ಕೆರೆ
6	ನೀರಾವರಿ ಯೋಜನೆ ಹಂತ –ಗುಲ್ಬರ್ಗಾ	2000	ಚಂದ್ರಮ್‌ಪಳ್ಳಿ, ಹತ್ತಿಕುಣಿ, ಸೌದಾಗರ್, ಮುಲ್ಲಾಮಾರಿ ಮೇಲ್ದಂಡೆ, ಬೆಣ್ಣೆತೋರಾ, ಭೀಮ ಏತ ನೀರಾವರಿ, ಅಮರ್ಜಾ, ಗಂಡೂರಿನಾಲಾ, ಮುಲ್ಲಾಮಾರಿ ಕೆಳದಂಡೆ, ಭೀಮ ತೊರೆ, ಕಾಗನಾ, ಕಾರಂಜಾ, ಚುಲ್ಕಿನಾಳ, ಮಂಜಾ ಏತ ನೀರಾವರಿ, ಅರೆಶಂಕರ್, ಚಿತ್ತವಾಡಗಿ, ಕಳಸಕೊಪ್ಪ, ನಾಗಥಾಣ ರಾಮನಹಳ್ಳಿ.

ಈ ಮೇಲ್ಕಂಡ ಕಾಡಾ ಪ್ರಾಧಿಕಾರಗಳು ತಮ್ಮ ವ್ಯಾಪ್ತಿಯಲ್ಲಿ ಬರುವ ನೀರಾವರಿ ಯೋಜನೆಗಳ ಕೇಂದ್ರ ವಲಯದ ಮತ್ತು ರಾಜ್ಯ ವಲಯದ ಅಚ್ಚುಕಟ್ಟು ಪ್ರದೇಶಾಭಿವೃದ್ಧಿಯ ನೀರಿನ ನಿರ್ವಹಣೆ ಕಾರ್ಯಕ್ರಮಗಳನ್ನು (CADAWM) ಅನುಷ್ಠಾನಗೊಳಿಸುತ್ತಿವೆ.

ಕೇಂದ್ರ ವಲಯ ಯೋಜನೆಗಳು:

ಭೂ ಅಭಿವೃದ್ಧಿ ಕಾಮಗಾರಿಗಳು (OFD) (ಕ್ಷೇತ್ರ ನೀರಾವರಿ ಕಾಲುವೆಗಳ ನಿರ್ಮಾಣ ಮತ್ತು ಅವಶ್ಯವಿರುವ ಕಡೆಯಲ್ಲಿ ಜಮೀನಿನ ಸಮತಟ್ಟು / ಆಕಾರಗೊಳಿಸುವುದು ಮತ್ತು ಕ್ಷೇತ್ರಗಳ ಗಡಿಗಳಲ್ಲಿ ಹೊಂದಾಣಿಕೆ ಮಾಡುವುದು ಇವುಗಳನ್ನು ಒಳಗೊಂಡಿದೆ.) ಸರ್ವೆ (ಭೌಗೋಳಿಕ ಪ್ರದೇಶ, ಮಣ್ಣು ಇತ್ಯಾದಿ.,) ಕೇತ್ರದ ಒಳಚರಂಡಿ ಕಾಲುವೆ, ಭೂಸವೆತವನ್ನು ತಡೆಗಟ್ಟುವುದು, ಅಳವಡಿಸಬಹುದಾದ ಪರೀಕ್ಷೆಗಳು ಮತ್ತು ಬೆಳೆ ಪ್ರಾತ್ಯಕ್ಷಿಕೆ, ತರಬೇತಿ, ನೀರಾವರಿ ನಿರ್ವಹಣಾ ಪಾಲುದಾರಿಕೆ ವ್ಯವಸ್ಥೆ ಮತ್ತು ಕೊರತೆಗಳನ್ನು, ನಿರ್ದೇಶನ ಹಾಗೂ ಆಡಳಿತ ಇತ್ಯಾದಿಯಲ್ಲಿನ ಪದ್ಧತಿಗಳನ್ನು ಸರಿಪಡಿಸುವುದು.

ರಾಜ್ಯ ವಲಯದ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಕಾರ್ಯಕ್ರಮ:–

ಉಗ್ರಾಣಗಳು ಮತ್ತು ವಸತಿ, ವಿಶೇಷ ಘಟಕ ಯೋಜನೆ ಮತ್ತು ಬುಡಕಟ್ಟು ಉಪಯೋಜನೆ, ರಸ್ತೆಗಳು, ಪಿಕ್‌ಅಪ್‌ಗಳು, ಕೃಷಿ ಹೊಂಡಗಳು, ವಾರಾಬಂದಿ ಇತ್ಯಾದಿಗಳ ನಿರ್ಮಾಣ.

ಸಚಿವಾಲಯದ ವಿವರಗಳು:

ಜಲಸಂಪನ್ಮೂಲ ಇಲಾಖೆಯ ಮಾನ್ಯ ಮಂತ್ರಿಗಳ ಹೆಸರು ಮತ್ತು ವಿಳಾಸ

(ಅ) ಶ್ರೀ ಬಸವರಾಜ ಬೊಮ್ಮಾಯಿ,

ಮಾನ್ಯ ಜಲಸಂಪನ್ಮೂಲ ಇಲಾಖೆ ಸಚಿವರು, ನಂ.327 'ಎ', 3ನೇ ಮಹಡಿ, ವಿಧಾನಸೌಧ, ಬೆಂಗಳೂರು–560 001. ದೂರವಾಣಿ: 080–222554661(ಕಛೇರಿ), 080–23338218, 23339115(ಮನೆ)

(ಆ) ಜಲಸಂಪನ್ಮೂಲ ಸಚಿವಾಲಯ ವಿಳಾಸ:

ಪ್ರಧಾನ ಕಾರ್ಯದರ್ಶಿಯವರು, ನಂ. 306, ಜಲಸಂಪನ್ಮೂಲ ಇಲಾಖೆ, 3ನೇ ಮಹಡಿ, ವಿಕಾಸ ಸೌಧ, ಬೆಂಗಳೂರು.

ಕಾರ್ಯದರ್ಶಿಯವರು, ನಂ. 305, ಜಲಸಂಪನ್ಮೂಲ ಇಲಾಖೆ, 3ನೇ ಮಹಡಿ, ವಿಕಾಸ ಸೌಧ, ಬೆಂಗಳೂರು.

ಜಂಟಿ ಕಾರ್ಯದರ್ಶಿಯವರು, ನಂ. 308, ಜಲಸಂಪನ್ಮೂಲ ಇಲಾಖೆ, 3ನೇ ಮಹಡಿ, ವಿಕಾಸ ಸೌಧ, ಬೆಂಗಳೂರು.

ಕರ್ತವ್ಯ ಮತ್ತು ವಿಧಿಗಳು:


ಜಲಸಂಪನ್ಮೂಲ ಇಲಾಖೆಯು ಮಾನ್ಯ ಜಲಸಂಪನ್ಮೂಲ ಸಚಿವರ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಸಚಿವಾಲಯದ ಮಟ್ಟದಲ್ಲಿ ಪ್ರಧಾನ ಕಾರ್ಯದರ್ಶಿಯವರು ಮತ್ತು ಕಾರ್ಯದರ್ಶಿಯವರು ಇಲಾಖೆಯ ಆಡಳಿತವನ್ನು ನಿರ್ವಹಿಸುತ್ತಾರೆ.

ಆಡಳಿತ ಕರ್ತವ್ಯಗಳು:

ಜಲಸಂಪನ್ಮೂಲ ಇಲಾಖೆಯಲ್ಲಿ ಸೇವಾ ವಿಷಯಗಳನ್ನು ನೋಡಿಕೊಳ್ಳಲು ವಿಶೇಷತಃ ಜಂಟಿ ಕಾರ್ಯದರ್ಶಿ(ಸೇವೆಗಳು) ಗಳು ನೇಮಕಗೊಂಡಿರುತ್ತಾರೆ. ಅವರು ಈ ಕೆಳಕಂಡ ಸೇವಾ ವಿಷಯವನ್ನು ನಿರ್ವಹಿಸುತ್ತಾರೆ.

- 'ಎ' ಗುಂಪಿನ ಅಧಿಕಾರಿಗಳ ವರ್ಗಾವಣೆ ಮತ್ತು ಸೇವಾ ವಿವರಗಳನ್ನು ನೋಡಿಕೊಳ್ಳುವುದು
- 'ಬಿ' ಗುಂಪಿನ ಮತ್ತು ಅದಕ್ಕೂ ಮೇಲ್ಪಟ್ಟ ಅಧಿಕಾರಿಗಳ ವಿರುದ್ಧದ ಇಲಾಖಾ ವಿಚಾರಣೆಗಳು ಮತ್ತು ಇತರೆ ವಿಚಾರಣೆಗಳ ಬಗ್ಗೆ ಕ್ರಮ ಜರುಗಿಸುವುದು.
- ರಜಾ ಮತ್ತು ಇತರ ಪರವಾನಗಿ ವಿಷಯಗಳು
- ಇತರ ಸೇವಾ ಮತ್ತು ಆಡಳಿತಾತ್ಮಕ ವಿಷಯಗಳು

ಸಚಿವಾಲಯದ ಜಲಸಂಪನ್ಮೂಲ ಇಲಾಖೆಯ ಆಡಳಿತ ಸಂಘಟನೆ, ಪ್ರಕಾರ್ಯಗಳು ಮತ್ತು ಕರ್ತವ್ಯಗಳ ವಿವರಗಳು:



ಇಲಾಖೆಗಳ ಸಾಲಿನಲ್ಲಿ ಬರುವ ಜಲಸಂಪನ್ಮೂಲ ಇಲಾಖೆಯು ರಾಜ್ಯ ಸರ್ಕಾರದ ಜಲಸಂಪನ್ಮೂಲ ಮಂತ್ರಾಲಯದಡಿಯಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಇಲಾಖೆಯ ಕರ್ತವ್ಯಗಳು ಮತ್ತು ಪ್ರಕಾರ್ಯಗಳು ಈ ಕೆಳಗಿನಂತಿದೆ.

❖ ಇಲಾಖೆಗೆ ಸಂಬಂಧಿಸಿದ ಸಮಗ್ರ ಮಾಹಿತಿಯನ್ನು ಈ ಸಚಿವಾಲಯವು ನೀಡುವ ಮೂಲಕ ಜಲಸಂಪನ್ಮೂಲ ಇಲಾಖೆಯ ಸಚಿವರಿಗೆ ನೆರವಾಗುವುದು.

❖ ಈ ಇಲಾಖೆಯು, ಇಡೀ ಜಲಸಂಪನ್ಮೂಲ ಇಲಾಖೆಯ ಆಡಳಿತಾತ್ಮಕ ನಿಯಂತ್ರಣವನ್ನು ಹೊಂದಿದೆ.

❖ ಈ ಇಲಾಖೆಯು, ಪೂರ್ಣಗೊಳಿಸಿದ ಯೋಜನೆಗಳ ನಿರ್ವಹಣೆ ಮತ್ತು ಮುಂದುವರೆದ ಯೋಜನೆಗಳ ಅನುಷ್ಠಾನ, ಹೊಸ ಯೋಜನೆಗಳ ಬಗ್ಗೆ ಯೋಜನೆ ಮಾಡುವುದು ಮತ್ತು ನಿಗಧಿತ ನೀರಾವರಿ ಸಾಮರ್ಥ್ಯವನ್ನು ಸೃಜಿಸುವುದಕ್ಕೆ ಸಂಬಂಧಿಸಿರುವುದಾಗಿದೆ.

❖ ಈ ಇಲಾಖೆಯು ತನ್ನ ಪರಿವ್ಯಾಪ್ತಿಗೆ ಬರುವ ಅಂದಾಜು ಪಟ್ಟಿಗಳು ಮತ್ತು ಟೆಂಡರುಗಳಿಗೆ ಹಾಗೂ ಎಲ್ಲಾ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡುತ್ತದೆ.

❖ ಈ ಇಲಾಖೆಯು ವಿಧಾನ ಮಂಡಲದಲ್ಲಿ ಮಂಡಿಸುವ ಇಲಾಖೆಯ ಆಯವ್ಯಯವನ್ನು ತಯಾರಿಸುತ್ತದೆ.

❖ ಅಧಿವೇಶನದ ಸಮಯದಲ್ಲಿ ಈ ಇಲಾಖೆಯು ವಿಧಾನ ಸಭೆಗೆ/ ವಿಧಾನ ಪರಿಷತ್ತಿಗೆ ಮತ್ತು ಲೋಕಸಭೆ / ರಾಜ್ಯ ಸಭೆಗೆ ಮಾಹಿತಿ ಒದಗಿಸುವ ಕರ್ತವ್ಯವನ್ನು ನಿರ್ವಹಿಸುತ್ತದೆ.

❖ ಈ ಇಲಾಖೆಯು ಸಚಿವ ಸಂಪುಟಕ್ಕೆ ಅಗತ್ಯವಿರುವ ದಸ್ತಾವೇಜನ್ನು ಮಂಡಿಸುತ್ತದೆ. ಮತ್ತು ತೀರ್ಮಾನ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ನೆರವಾಗುವುದು.

❖ ಈ ಇಲಾಖೆಯು ಕರಡು ಮಸೂದೆಯನ್ನು ತಯಾರಿಸುವುದು, ಸರ್ಕಾರಿ ಆದೇಶಗಳನ್ನು ಹೊರಡಿಸುವುದು, ತಿದ್ದುಪಡಿಗಳನ್ನು, ಕಾಯಿದೆ ಮತ್ತು ನಿಯಮಗಳನ್ನು ಪಾಸು ಮಾಡುವುದು.

ಜಲಸಂಪನ್ಮೂಲ ಇಲಾಖಾ ಸಚಿವಾಲಯದ ಅಧಿಕಾರಿಗಳ / ಸಿಬ್ಬಂಧಿಯ ಅಧಿಕಾರ ಮತ್ತು ಕರ್ತವ್ಯಗಳ ವಿವರಗಳು:

1. ಪ್ರಧಾನ ಕಾರ್ಯದರ್ಶಿ
2. ಕಾರ್ಯದರ್ಶಿ
3. ಜಂಟಿ ಕಾರ್ಯದರ್ಶಿ (ಸೇವೆಗಳು)
4. ಉಪ ಕಾರ್ಯದರ್ಶಿ(ದೊಡ್ಡ ಮತ್ತು ಸಣ್ಣ ನೀರಾವರಿ)
5. ಉಪ ಕಾರ್ಯದರ್ಶಿ(ಕೃಷ್ಣ ಭಾಗ್ಯ ಜಲ ನಿಗಮ)
6. ಅಧೀನ ಕಾರ್ಯದರ್ಶಿ(ಸೇವೆಗಳು–ಎ)
7. ಅಧೀನ ಕಾರ್ಯದರ್ಶಿ(ಸೇವೆಗಳು–ಬಿ)
8. ಅಧೀನ ಕಾರ್ಯದರ್ಶಿ(ತಾಂತ್ರಿಕ–1)
9. ಅಧೀನ ಕಾರ್ಯದರ್ಶಿ(ಕಾಡಾ)
10. ವಿಶೇಷ ಅಧಿಕಾರಿ(ತಾಂತ್ರಿಕ–4)
11. ವಿಶೇಷ ಕರ್ತವ್ಯಾಧಿಕಾರಿ (ಕೃಷ್ಣ ಭಾಗ್ಯ ಜಲ ನಿಗಮ)
12. ವಿಶೇಷ ಕರ್ತವ್ಯಾಧಿಕಾರಿ (ತಾಂತ್ರಿಕ–1)ಕಾವೇರಿ
13. ವಿಶೇಷ ಕರ್ತವ್ಯಾಧಿಕಾರಿ (ತಾಂತ್ರಿಕ)ಎಂಎಂಐ–2 & 3
14. ಸಿಬ್ಬಂದಿ.

ಶ್ರೀ ಡಿ. ಸತ್ಯಮೂರ್ತಿ, ಐ.ಎ.ಎಸ್., ಪ್ರಧಾನ ಕಾರ್ಯದರ್ಶಿಯವರ ಕಾರ್ಯಭಾರ

ಜಲಸಂಪನ್ಮೂಲ ಇಲಾಖೆಯ ಇಡೀ ಹೊಣೆಗಾರಿಕೆಯನ್ನು ಪ್ರಧಾನ ಕಾರ್ಯದರ್ಶಿಗಳಿಗೆ ವಹಿಸಲಾಗಿದೆ. ಪ್ರಧಾನ ಕಾರ್ಯದರ್ಶಿಗಳು ನಿರ್ವಹಿಸಬೇಕಾದ ಪ್ರಕಾರ್ಯಗಳು ಮತ್ತು ಕರ್ತವ್ಯಗಳು ಈ ಕೆಳಗಿನಂತಿದೆ:

❖ ಇಲಾಖೆಯ ಕಾರ್ಯಕ್ರಮವನ್ನು ಮತ್ತು ಕಾರ್ಯನೀತಿಯನ್ನು ರಚಿಸುವುದು.

❖ ಅಧೀನ ಸಿಬ್ಬಂಧಿಯ ಸಹಕಾರ ಮತ್ತು ಸಮನ್ವಯದೊಂದಿಗೆ ಇಲಾಖೆಯ ಸುಗಮವಾದ ಆಡಳಿತ ನಡೆಸಿಕೊಂಡು ಹೋಗಲು ಸಹಾಯ ಮಾಡುವುದು.

❖ ಜಲಸಂಪನ್ಮೂಲ ಸಚಿವರು ಅಪೇಕ್ಷಿಸಿದ ಶಾಖೆಗಳ / ವಿಭಾಗದ ವಿವರ ಮತ್ತು ಮಾಹಿತಿಯನ್ನು ನೀಡುವುದು.

❖ ಇಲಾಖೆಯ ಬೆಳಕು ಚೆಲ್ಲುವ ಅಧಿಕಾರಿಯಾಗಿ ಕಾರ್ಯ ನಿರ್ವಹಿಸುವುದು.

ಶ್ರೀ ಪಿ.ಎನ್. ಶ್ರೀನಿವಾಸಾಚಾರಿ(ಪ್ರ), ಐ.ಎ.ಎಸ್., ಕಾರ್ಯದರ್ಶಿಯವರ ಕಾರ್ಯಭಾರ:–

- ❖ ರಾಜ್ಯ ಮಟ್ಟದಲ್ಲಿ ಇಲಾಖೆಯ ಆಡಳಿತದ ವಿಷಯವನ್ನು ನೋಡಿಕೊಳ್ಳುವುದು.
- ❖ ಜ.ಸಂ. ಇಲಾಖೆಯ ಪ್ರತಿನಿಧಿಯಾಗಿ ಕೇಂದ್ರ ಮಟ್ಟದಲ್ಲಿ NWDA, CBIP, ಸದಸ್ಯರಾಗಿ ಪ್ರತಿನಿಧಿಸುವುದು.
- ❖ ಪ್ರಧಾನ ಕಾರ್ಯದರ್ಶಿಗಳ ಸಹಕಾರದೊಂದಿಗೆ ಇಲಾಖೆಯ ಉಸ್ತುವಾರಿಯನ್ನು ಮಾಡಲು ನಿಯಮಗಳನ್ನು ಮತ್ತು ನಿಬಂಧನೆಗಳನ್ನು ರಚಿಸುವುದು.
- ❖ ಜ.ಸಂ. ಇಲಾಖೆಯ ಅಡಿಯಲ್ಲಿ ಸ್ಥಾಪಿಸಿರುವ 3 ನಿಗಮಗಳಿಗೆ ನಿರ್ದೇಶಕರಾಗಿ ಕಾರ್ಯ ನಿರ್ವಹಿಸುವುದು.
- ❖ ಬೃಹತ್ ಮತ್ತು ಮಧ್ಯಮ ನೀರಾವರಿ ಯೋಜನೆಗಳ ಯೋಜನಾ ವರದಿ ತಯಾರಿಕೆ ಕಾರ್ಯಾನುಷ್ಠಾನ ಮತ್ತು ಉಸ್ತುವಾರಿಯನ್ನು ನೋಡಿಕೊಳ್ಳುವುದು.
- ❖ ಪ್ರಧಾನ ಕಾರ್ಯದರ್ಶಿಗಳ ಸಮನ್ವಯದೊಂದಿಗೆ ಸರ್ಕಾರದ ಮಟ್ಟದಲ್ಲಿ ನಡೆಯುವ ಮಾಸಿಕ ಸಭೆಯಲ್ಲಿ ಬೃಹತ್ ಮತ್ತು ಮಧ್ಯಮ ನೀರಾವರಿ ಯೋಜನೆಗಳ ಭೌತಿಕ ಮತ್ತು ಆರ್ಥಿಕ ಪ್ರಗತಿಯನ್ನು ನಿಯತವಾಗಿ ಪರಾಮರ್ಶಿಸುವುದು.
- ❖ ತಾಂತ್ರಿಕ ಸಲಹಾ ಸಮಿತಿ ಮತ್ತು TAC, MIPC ಸಕ್ರಿಯ ಸದಸ್ಯರಾಗಿ ಕಾರ್ಯ ನಿರ್ವಹಿಸುವುದು ಮತ್ತು ಪಾಲ್ಗೊಳ್ಳುವುದು.
- ❖ ಅಗತ್ಯವಿರುವೆಡೆಯಲ್ಲಿ ಯೋಜನಾ ಸ್ಥಳಕ್ಕೆ ಭೇಟಿ ನೀಡುವುದು ಮತ್ತು ಯೋಜನೆಯ ಪ್ರಗತಿಯನ್ನು ಗಮನಿಸುವುದು.

ಶ್ರೀ ಗುರುಮೂರ್ತಿ ಎಸ್. ಹೆಗಡೆ, ಜಂಟಿ ಕಾರ್ಯದರ್ಶಿಯವರ ಕಾರ್ಯಭಾರ:

- ❖ ಜಲಸಂಪನ್ಮೂಲ ಇಲಾಖೆಯ ಕಾರ್ಯದರ್ಶಿಗಳ ನಂತರ ಬರುವ ಅಧೀನ ಅಧಿಕಾರಿ ಜಂಟಿಕಾರ್ಯದರ್ಶಿ (ಸೇವೆಗಳು) ಆಗಿರುತ್ತಾರೆ.
- ❖ ಸೇವಾ ವಿಷಯಗಳಿಗೆ ಸಂಬಂಧಿಸಿದಂತೆ ನೋಡುವುದು.
- ❖ ಅಧೀನ ಕಾರ್ಯದರ್ಶಿ(ಸೇ–ಎ), ಅಧೀನ ಕಾರ್ಯದರ್ಶಿ (ಸೇ–ಬಿ)ಶಾಖೆ ಮತ್ತು ಅವರ ಸಿಬ್ಬಂಧಿಯನ್ನೊಳಗೊಂಡ ಶಾಖೆಗಳ ಕೆಲಸಕಾರ್ಯಗಳ ಉಸ್ತುವಾರಿ.
- ❖ ಶಾಖೆಗೆ ಸಂಬಂಧಿಸಿದ ಮಾಹಿತಿ ವಿವರಗಳನ್ನು ಕಾರ್ಯದರ್ಶಿಗಳು ಬಯಸಿದಾಗ ಒದಗಿಸುವುದು. ಮತ್ತು ಅದಕ್ಕೆ ಜವಾಬ್ದಾರಿಯನ್ನು ನಿಗಧಿಪಡಿಸುವುದು.
- ❖ ಜಲಸಂಪನ್ಮೂಲ ಇಲಾಖೆಯ ನೋಡಲ್ ಅಧಿಕಾರಿಯಾಗಿ ಕಾರ್ಯ ನಿರ್ವಹಿಸುವುದು.

ಶ್ರೀ ಎಸ್.ಎ. ಖಾದ್ರಿ. ಉಪ ಕಾರ್ಯದರ್ಶಿ(ಬೃಹತ್ ಮತ್ತು ಮಧ್ಯಮ ನೀರಾವರಿ):–

ಉಪಕಾರ್ಯದರ್ಶಿ (ಬೃಹತ್ ಮತ್ತು ಮಧ್ಯಮ ನೀರಾವರಿ) ಇವರು ಜಲಸಂಪನ್ಮೂಲ ಇಲಾಖೆಯ ಕಾರ್ಯದರ್ಶಿಯವರ ಅಧೀನದಲ್ಲಿ ಬರುವ ನಂತರದ ಅಧಿಕಾರಿಯಾಗಿರುತ್ತಾರೆ. ಇವರ ಪ್ರಕಾರ್ಯಗಳು ಮತ್ತು ಕರ್ತವ್ಯಗಳು ಈ ಕೆಳಗಿನಂತಿದೆ.

- ❖ ತುಂಗಾ ಮೇಲ್ದಂಡೆ ಯೋಜನಾ ವಲಯದ(ಕರ್ನಾಟಕ ನೀರಾವರಿ ನಿಗಮ ನಿಯಮಿತದಡಿಯಲ್ಲಿ ಬರುವ ಕಾಮಗಾರಿಗಳನ್ನು ಬಿಟ್ಟು) ಬೃಹತ್ ಮತ್ತು ಮಧ್ಯಮ ನೀರಾವರಿ ವಿಷಯಗಳಿಗೆ ಸಂಬಂಧಿಸಿದಂತೆ ನಿರ್ವಹಿಸುವುದು.
- ❖ ತಮ್ಮ ಅಧೀನದಲ್ಲಿ ಬರುವ ಅಧೀನ ಕಾರ್ಯದರ್ಶಿ(ತಾಂತ್ರಿಕ–1), ಅಧೀನ ಕಾರ್ಯದರ್ಶಿ(ಕಾಡಾ)ಶಾಖೆಗಳ ಮತ್ತು ಸಿಬ್ಬಂಧಿಯ ಕೆಲಸ ಕಾರ್ಯಗಳನ್ನು ಉಸ್ತುವಾರಿ ಮಾಡುವುದು.
- ❖ AIBP, NABARD, CBIP, ಆಯವ್ಯಯ, ವಿಶ್ವ ಸಮಿತಿ, SKSWA, HIC ಮತ್ತು ಕಾಡಾ ಇವುಗಳಿಗೆ ಸಂಬಂಧಿಸಿದ ವಿಷಯ ಮತ್ತು ಕಾಮಗಾರಿಗಳ ನಿರ್ವಹಣೆ ಮಾಡುವುದು.
- ❖ ಶಾಖೆಗೆ / ವಿಭಾಗಕ್ಕೆ ಸಂಬಂಧಿಸಿದ ಮಾಹಿತಿ / ವಿವರಗಳನ್ನು ಕಾರ್ಯದರ್ಶಿಯವರು ಬಯಸಿದಾಗ ಮಂಡಿಸುವುದು ಮತ್ತು ಅದಕ್ಕೆ ಹೊಣೆಗಾರರಿರುವುದು.

ಶ್ರೀ ಹೆಚ್. ಪರಶು ರಾಮ್, ಉಪ ಕಾರ್ಯದರ್ಶಿ(ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ)ರವರ ಕಾರ್ಯಭಾರ:–

ಉಪಕಾರ್ಯದರ್ಶಿ (ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ) ಇವರು ಜಲಸಂಪನ್ಮೂಲ ಇಲಾಖೆಯ ಕಾರ್ಯದರ್ಶಿಯವರ ಅಧೀನದಲ್ಲಿ ಬರುವ ನಂತರದ ಅಧಿಕಾರಿಯಾಗಿರುತ್ತಾರೆ. ಇವರ ಪ್ರಕಾರ್ಯಗಳು ಮತ್ತು ಕರ್ತವ್ಯಗಳು ಈ ಕೆಳಗಿನಂತಿದೆ.

- ❖ ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತಕ್ಕೆ ಸಂಬಂಧಿಸಿದ ವಿಷಯಗಳ ನಿರ್ವಹಣೆ.
- ❖ ಅಧೀನದಲ್ಲಿ ಬರುವ ಅಧೀನ ಕಾರ್ಯದರ್ಶಿ(ತಾಂತ್ರಿಕ–4), ಅಧೀನ ಕಾರ್ಯದರ್ಶಿ,(ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ), ವಿಶೇಷ ಕರ್ತವ್ಯಾಧಿಕಾರಿ(ತಾಂತ್ರಿಕ), ವಿಶೇಷ ಕರ್ತವ್ಯಾಧಿಕಾರಿ(ಎಂಎಂಐ–3) ಮತ್ತು ಅವರುಗಳ ಶಾಖೆಯ ಕೆಲಸ ಕಾರ್ಯಗಳ ಉಸ್ತುವಾರಿ.
- ❖ ತಾಂತ್ರಿಕ ಸಲಹಾ ಸಮಿತಿ, ಅರ್ಜಿ ಸಮಿತಿ, ಸಾರ್ವಜನಿಕ ಉದ್ದಿಮೆಗಳ ಸಮಿತಿ ಮತ್ತು ಭರವಸೆ ಸಮಿತಿ ಇವುಗಳಿಗೆ ಸಂಬಂಧಿಸಿದ ವಿಷಯಗಳು ಮತ್ತು ಕೆಲಸಗಳ ನಿರ್ವಹಣೆ.
- ❖ ಶಾಖೆಗೆ / ವಿಭಾಗಕ್ಕೆ ಸಂಬಂಧಿಸಿದ ಮಾಹಿತಿ / ವಿವರಗಳನ್ನು ಕಾರ್ಯದರ್ಶಿಯವರು ಬಯಸಿದಾಗ ಮಂಡಿಸುವುದು ಮತ್ತು ಅದಕ್ಕೆ ಹೊಣೆಗಾರರಿರುವುದು.
- ❖ ಜಲಸಂಪನ್ಮೂಲ ಇಲಾಖೆಯ ತಾಂತ್ರಿಕ ವಿಷಯಗಳಿಗೆ ಸಂಬಂಧಿಸಿದಂತೆ ನೋಡಲ್ ಅಧಿಕಾರಿಯಾಗಿ ಕಾರ್ಯ ನಿರ್ವಹಿಸುವುದು.

ಶ್ರೀ ವಿ. ನಾಗರಾಜಯ್ಯ, ಅಧೀನ ಕಾರ್ಯದರ್ಶಿ(ಸೇವೆಗಳು–ಎ)ರವರ ಕಾರ್ಯಭಾರ:–

ಇವರು ಶಾಖೆಯ ಎಲ್ಲಾ ಮೇಲ್ವಿಚಾರಣೆ ಮತ್ತು ಕರ್ನಾಟಕ ಸಚಿವಾಲಯ ಕೈಪಿಡಿಯಂತೆ ಕಾರ್ಯನಿರ್ವಹಿಸುತ್ತಾರೆ. ಪ್ರಧಾನಕಾರ್ಯದರ್ಶಿ/ಕಾರ್ಯದರ್ಶಿ/ಜಂಟಿಕಾರ್ಯದರ್ಶಿಗಳು(ಸೇವೆಗಳು) ಇವರುಗಳ ಅಧೀನದಲ್ಲಿ ಕಾರ್ಯನಿರ್ವಹಿಸುವುದು.

- ❖ ಜಲಸಂಪನ್ಮೂಲ ಇಲಾಖೆಯ ಗ್ರೂಪ್–ಎ ಅಧಿಕಾರಿಗಳ ಸೇವಾ ವಿಷಯಗಳಿಗೆ ಸಂಬಂಧಿಸಿದಂತೆ ಕಾರ್ಯ ನಿರ್ವಹಿಸುವುದು.
- ❖ ಶಾಖೆಗೆ ಸಂಬಂಧಿಸಿದ ಮಾಹಿತಿ ಮತ್ತು ವಿವರಗಳನ್ನು ಶಾಖೆಯ ಸಿಬ್ಬಂಧಿಯ ಸಹಕಾರದೊಂದಿಗೆ ಜಂಟಿಕಾರ್ಯದರ್ಶಿ(ಸೇವೆಗಳು)ರವರಿಗೆ ನೇರವಾಗುವುದು.
- ❖ ಕಡತಗಳನ್ನು ನಿಯಮಾನುಸಾರ ಪರಿಶೀಲಿಸಿ ಮೇಲಾಧಿಕಾರಿಗಳಿಗೆ ಮಂಡಿಸುವುದು.
- ❖ ಸರ್ಕಾರದ ಆದೇಶಗಳನ್ನು ಅಧಿಕೃತವಾಗಿ ಹೊರಡಿಸುವುದು.
- ❖ ಶಾಖೆಗೆ ಬರುವ ಕಾಗದ ಪತ್ರಗಳನ್ನು ಸ್ವೀಕರಿಸಿ ಕೆಳಗಿನ ಅಧಿಕಾರಿ/ನೌಕರರುಗಳಿಗೆ ಹಂಚುವುದು.
- ❖ ಪ್ರತಿ ತಿಂಗಳು ಎಂ.ಎಂ.ಆರ್.ಸಭೆಗೆ ಹಾಜರಾಗಿ ವಿವಿಧ ವಿಷಯಗಳ ಬಗ್ಗೆ ಮುಂದಿನ ಕ್ರಮ ಜರುಗಿಸುವುದು.
- ❖ ವಿಧಾನ ಸಭೆ ಮತ್ತು ವಿಧಾನ ಪರಿಷತ್ತು ನಡವಳಿ ಪ್ರಶ್ನೆಗಳಿಗೆ ಉತ್ತರವನ್ನು ತಯಾರಿಸಿ ಮೇಲಾಧಿಕಾರಿಗಳಿಗೆ ಸಲ್ಲಿಸುವುದು.
- ❖ ಸಾಮಾನ್ಯ ಆಡಳಿತವನ್ನು ನಿರ್ವಹಿಸುವುದು.
- ❖ ಕಛೇರಿಯ ಕೆಲಸ ಕಾರ್ಯಗಳಲ್ಲಿ ನಿಯಮಾನುಸಾರ ಜವಾಬ್ದಾರಿಯುತವಾಗಿ ಕೆಲಸ ನಿರ್ವಹಿಸುವುದು.

ಎಸ್. ಬಿ. ರುದ್ರಪ್ಪ, ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು–ಬಿ)ರವರ ಕಾರ್ಯಭಾರ:–

ಇವರು ಶಾಖೆಯ ಎಲ್ಲಾ ಮೇಲ್ವಿಚಾರಣೆ ಮತ್ತು ಕರ್ನಾಟಕ ಸಚಿವಾಲಯ ಕೈಪಿಡಿಯಂತೆ ಕಾರ್ಯನಿರ್ವಹಿಸುತ್ತಾರೆ. ಪ್ರಧಾನಕಾರ್ಯದರ್ಶಿ/ಕಾರ್ಯದರ್ಶಿ/ಜಂಟಿಕಾರ್ಯದರ್ಶಿಗಳು(ಸೇವೆಗಳು) ಇವರುಗಳ ಅಧೀನದಲ್ಲಿ ಕಾರ್ಯನಿರ್ವಹಿಸುವುದು

- ❖ ಇಡೀ ಜಲಸಂಪನ್ಮೂಲ ಇಲಾಖೆಯ ಗ್ರೂಪ್–ಬಿ, ಗ್ರೂಪ್–ಸಿ ಮತ್ತು ಗ್ರೂಪ್–ಡಿ ಸಿಬ್ಬಂಧಿಗಳ ಕಡತಗಳನ್ನು ನಿಯಮಾನುಸಾರ ಪರಿಶೀಲಿಸಿ ಮೇಲಾಧಿಕಾರಿಗಳಿಗೆ ಮಂಡಿಸುವುದು.
- ❖ ಸರ್ಕಾರದ ಆದೇಶಗಳನ್ನು ಅಧಿಕೃತವಾಗಿ ಹೊರಡಿಸುವುದು.
- ❖ ಇಲಾಖೆಯಲ್ಲಿ ಬರುತ್ತಿರುವ ಕಾಗದ ಪತ್ರಗಳನ್ನು ಸ್ವೀಕರಿಸಿ ಕೆಳಗಿನ ಅಧಿಕಾರಿಗಳಿಗೆ ಹಂಚುವುದು.
- ❖ ವಿಧಾನಸಭೆ ಮತ್ತು ವಿಧಾನ ಪರಿಷತ್ತು ನಡವಳಿ ಪ್ರಶ್ನೆಗಳಿಗೆ ಉತ್ತರವನ್ನು ತಯಾರಿಸಿ ಮೇಲಾಧಿಕಾರಿಗಳಿಗೆ ಸಲ್ಲಿಸುವುದು.
- ❖ ಸಾಮಾನ್ಯ ಆಡಳಿತವನ್ನು ನಿರ್ವಹಿಸುವುದು.
- ❖ ಕಛೇರಿಯ ಕೆಲಸ ಕಾರ್ಯಗಳಲ್ಲಿ ನಿಯಮಾನುಸಾರ ಜವಾಬ್ದಾರಿಯುತವಾಗಿ ಕೆಲಸ ನಿರ್ವಹಿಸುವುದು.
- ❖ ಕರ್ನಾಟಕ ಸರ್ಕಾರ ಸಚಿವಾಲಯ ಕೈಪಿಡಿಯ ಪ್ರಕಾರ ಕಾರ್ಯನಿರ್ವಹಿಸುವುದು.

ಸಿ. ಶ್ರೀನಿವಾಸಲು, ಸರ್ಕಾರದ ಅಧೀನ ಕಾರ್ಯದರ್ಶಿ(ತಾಂತ್ರಿಕ–1)ರವರ ಕಾರ್ಯಭಾರ:–

ಅಧೀನ ಕಾರ್ಯದರ್ಶಿ(ತಾಂತ್ರಿಕ–1) ರವರು ಉಪಕಾರ್ಯದರ್ಶಿ(ಬೃಹತ್ ಮತ್ತು ಮಧ್ಯಮ ನೀರಾವರಿ) ಇವರ ಅಧೀನದಲ್ಲಿ ಬರುತ್ತಾರೆ. ಇವರ ಪ್ರಕಾರ್ಯಗಳು ಮತ್ತು ಕರ್ತವ್ಯಗಳು ಈ ಕೆಳಗಿನಂತಿದೆ.

- ❖ ನೀರಾವರಿ ಕೇಂದ್ರ ವಲಯ (ಮುನಿರಾಬಾದ್), ತುಂಗಾ ಮೇಲ್ದಂಡೆ ಯೋಜನಾ ವಲಯ(ಕೆ.ಎನ್.ಎನ್.ಎಲ್. ರಡಿಯಲ್ಲಿ ಬರುವ ಕಾಮಗಾರಿಗಳನ್ನು ಬಿಟ್ಟು) ಮತ್ತು ವಾರಾಹಿ ಯೋಜನೆ ಇವುಗಳಿಗೆ ಸಂಬಂಧಿಸಿದ ವಿಷಯಗಳು ಮತ್ತು ವಿಷಯಗಳು ಮತ್ತು ಕೆಲಸಕಾರ್ಯಗಳ ನಿರ್ವಹಣೆ.
- ❖ ಆಯವ್ಯಯವನ್ನು ಹಾಗೂ ವಾರ್ಷಿಕ ಯೋಜನೆಯನ್ನು ಮತ್ತು ಮಾಸಿಕ ಬಹುವಿಧದ ಪುನರಾವಲೋಕನ ಸಭೆಗೆ ಅವಶ್ಯವಿರುವ ಕಾರ್ಯಸೂಚಿಯನ್ನು ತಯಾರಿಸುವುದು.
- ❖ ಉಪಕಾರ್ಯದರ್ಶಿ(ಬೃಹತ್ ಮತ್ತು ಮಧ್ಯಮ ನೀರಾವರಿ) ರವರಿಗೆ ಶಾಖೆಗೆ ಸಂಬಂಧಿಸಿದ ವಿವರಗಳನ್ನು ಮತ್ತು ಮಾಹಿತಿಯನ್ನು ಸಿಬ್ಬಂಧಿಯ ಸಹಕಾರದೊಂದಿಗೆ ಸಲ್ಲಿಸುವ ಮೂಲಕ ಅವರಿಗೆ ನೆರವಾಗುವುದು.

ಶ್ರೀ ವೆಂಕಟೇಶ್, ಸರ್ಕಾರದ ಅಧೀನ ಕಾರ್ಯದರ್ಶಿ(ಕಾಡಾ) ರವರ ಕಾರ್ಯಭಾರ:–

ಅಧೀನ ಕಾರ್ಯದರ್ಶಿ(ಕಾಡಾ) ರವರು ಉಪಕಾರ್ಯದರ್ಶಿ(ಬೃಹತ್ ಮತ್ತು ಮಧ್ಯಮ ನೀರಾವರಿ) ಇವರ ಅಧೀನದಲ್ಲಿ ಬರುತ್ತಾರೆ. ಇವರ ಪ್ರಕಾರ್ಯಗಳು ಮತ್ತು ಕರ್ತವ್ಯಗಳು ಈ ಕೆಳಗಿನಂತಿದೆ.

- ❖ ಅಚ್ಚುಕಟ್ಟು ಅಭಿವೃದ್ಧಿ ಪ್ರದೇಶ ಕಾರ್ಯಕ್ರಮ(ಕಾಡಾ) ಮತ್ತು ಜಲ ಮತ್ತು ಭೂ ನಿರ್ವಹಣೆ ಸಂಸ್ಥೆ (ವಾಲ್ಮಿ) ಇವುಗಳಿಗೆ ಸಂಬಂಧಿಸಿದ ವಿಷಯಗಳು ಮತ್ತು ಕೆಲಸಕಾರ್ಯಗಳ ನಿರ್ವಹಣೆ.
- ❖ ಉಪಕಾರ್ಯದರ್ಶಿ(ಬೃಹತ್ ಮತ್ತು ಮಧ್ಯಮ ನೀರಾವರಿ) ರವರಿಗೆ ಶಾಖೆಗೆ ಸಂಬಂಧಿಸಿದ ವಿವರಗಳನ್ನು ಮತ್ತು ಮಾಹಿತಿಯನ್ನು ಸಿಬ್ಬಂಧಿಯ ಸಹಕಾರದೊಂದಿಗೆ ಸಲ್ಲಿಸುವ ಮೂಲಕ ಅವರಿಗೆ ನೆರವಾಗುವುದು.

ಹೆಚ್.ಕೆ. ಸಂಪತ್‌ಕುಮಾರ್, ವಿಶೇಷಾಧಿಕಾರಿ (ತಾಂತ್ರಿಕ–4) ರವರ ಕಾರ್ಯಭಾರ:–

ವಿಶೇಷಾಧಿಕಾರಿ(ತಾಂತ್ರಿಕ–4) ರವರು ಉಪಕಾರ್ಯದರ್ಶಿ(ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ) ಇವರ ಅಧೀನದಲ್ಲಿ ಬರುತ್ತಾರೆ. ಇವರ ಪ್ರಕಾರ್ಯಗಳು ಮತ್ತು ಕರ್ತವ್ಯಗಳು ಈ ಕೆಳಗಿನಂತಿದೆ.

- ❖ ಜಲಸಂಪನ್ಮೂಲ ಅಭಿವೃದ್ಧಿ ಸಂಸ್ಥೆ, ರಾಜ್ಯ ಜಲನೀತಿ, ಭರವಸೆ ಸಮಿತಿ ಇವುಗಳಿಗೆ ಸಂಬಂಧಿಸಿದ ವಿಷಯಗಳ ನಿರ್ವಹಣೆ.
- ❖ ಕರ್ನಾಟಕ ನೀರಾವರಿ ನಿಗಮ ನಿಯಮಿತದಡಿಯಲ್ಲಿ ಬರುವ ಯೋಜನೆಗಳ ಕಾಮಗಾರಿ ವಿವರಗಳನ್ನು ನೋಡುವುದು.
- ❖ ಉಪಕಾರ್ಯದರ್ಶಿ(ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ) ರವರಿಗೆ ಶಾಖೆಗೆ ಸಂಬಂಧಿಸಿದ ವಿವರಗಳನ್ನು ಮತ್ತು ಮಾಹಿತಿಯನ್ನು ಸಿಬ್ಬಂಧಿಯ ಸಹಕಾರದೊಂದಿಗೆ ಸಲ್ಲಿಸುವ ಮೂಲಕ ಅವರಿಗೆ ನೆರವಾಗುವುದು.
- ❖ ಮೇಲೆ ಹೇಳಿರುವ ಎಲ್ಲಾ ಕಾರ್ಯಭಾರಗಳ ನಿರ್ವಹಣೆ, ಉಸ್ತುವಾರಿ ಮತ್ತು ವಿಲೇವಾರಿ, ಮೇಲಧಿಕಾರಿಗಳು ನೀಡುವ ಆದೇಶಗಳ ಪರಿಪಾಲನೆ, ಮೇಲಧಿಕಾರಿಗಳು, ಮಾನ್ಯ ಸಚಿವರುಗಳು ಮತ್ತು ಮಾನ್ಯ ಮುಖ್ಯ ಮಂತ್ರಿಗಳು ನೆರವೇರಿಸುವ ಸಂಬಂಧಿತ ವಿಷಯಗಳ ಸಭೆಗಳ ನಿರ್ವಹಣೆ, ಸಚಿವ ಸಂಪುಟದ ವಿಷಯಗಳು ಮತ್ತು ವಿಧಾನ ಸಭೆ ಮತ್ತು ವಿಧಾನ ಪರಿಷತ್‌ನ ಪ್ರಶ್ನೆಗಳು, ಗಮನ ಸೆಳೆಯುವ ಸೂಚನೆಗಳು ಶೂನ್ಯ ವೇಳೆಯ ವಿಷಯ ಮತ್ತು ನಿಯಮ 351ರ ಬಗ್ಗೆ ನಿರ್ವಹಣೆ, ಇತ್ಯಾದಿ.

ಶ್ರೀ ಐ.ಡಿ. ಧಮನ್, ವಿಶೇಷ ಕರ್ತವ್ಯಾಧಿಕಾರಿ (ಕೃಭಾಜನಿ, ವಿ.ಕೋಶ) ಕಾರ್ಯಭಾರ :–

ವಿಶೇಷಾಧಿಕಾರಿ(ತಾಂತ್ರಿಕ–4) ರವರು ಉಪಕಾರ್ಯದರ್ಶಿ(ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ) ಇವರ ಅಧೀನದಲ್ಲಿ ಬರುತ್ತಾರೆ. ಇವರ ಪ್ರಕಾರ್ಯಗಳು ಮತ್ತು ಕರ್ತವ್ಯಗಳು ಈ ಕೆಳಗಿನಂತಿದೆ.

- ❖ ಕರ್ನಾಟಕ ನೀರಾವರಿ ನಿಗಮ ನಿಯಮಿತಕ್ಕೆ ಹಂಚಿಕೆ ಮಾಡಿದ ನಿಧಿಗಳ (funds) ವಿಷಯಕ್ಕೆ ಸಂಬಂಧಿಸಿದಂತೆ ನಿರ್ವಹಣೆ.
- ❖ ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತದ ಮತ್ತು ನೀರಾವರಿ ಯೋಜನಾ ವಲಯ(ಗುಲ್ಬರ್ಗಾ) ಇವುಗಳಿಗೆ ಸಂಬಂಧಿಸಿದ ವಿಷಯಗಳ ಮತ್ತು ಕೆಲಸಕಾರ್ಯಗಳ ನಿರ್ವಹಣೆ.

- ಸಾರ್ವಜನಿಕ ಉದ್ದಿಮೆಗಳ ಸಮಿತಿ, ಅಂದಾಜು ಸಮಿತಿ ಮತ್ತು ಅಂತರ್ ರಾಜ್ಯ ನದಿಗಳು ಇವುಗಳಿಗೆ ಸಂಬಂಧಿಸಿದ ವಿಷಯಗಳ ನಿರ್ವಹಣೆಯನ್ನು ನಿಭಾಯಿಸುವುದು.
- ಉಪಕಾರ್ಯದರ್ಶಿ(ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ) ರವರಿಗೆ ಶಾಖೆಗೆ ಸಂಬಂಧಿಸಿದ ವಿವರಗಳನ್ನು ಮತ್ತು ಮಾಹಿತಿಯನ್ನು ಸಿಬ್ಬಂಧಿಯ ಸಹಕಾರದೊಂದಿಗೆ ಸಲ್ಲಿಸುವ ಮೂಲಕ ಅವರಿಗೆ ನೆರವಾಗುವುದು.
- ಇವರು ಕೃಷ್ಣಾ ಭಾಗ್ಯ ಜಲ ನಿಗಮ ಶಾಖೆಯ ಮೇಲ್ವಿಚಾರಣೆ ಮತ್ತು ಕರ್ನಾಟಕ ಸಚಿವಾಲಯ ಕೈಪಿಡಿಯಂತೆ ಕಾರ್ಯನಿರ್ವಹಿಸುತ್ತಾರೆ. ಪ್ರಧಾನಕಾರ್ಯದರ್ಶಿ/ಕಾರ್ಯದರ್ಶಿ/ ಜಂಟಿಕಾರ್ಯದರ್ಶಿಗಳು (ಸೇವೆಗಳು) ಇವರುಗಳ ಅಧೀನದಲ್ಲಿ ಕಾರ್ಯನಿರ್ವಹಿಸುವುದು.
- ಕಡತಗಳನ್ನು ನಿಯಮಾನಸಾರ ಪರಿಶೀಲಿಸಿ ಮೇಲಾಧಿಕಾರಿಗಳಿಗೆ ಮಂಡಿಸುವುದು.
- ಸರ್ಕಾರದ ಆದೇಶಗಳನ್ನು ಅಧಿಕೃತವಾಗಿ ಹೊರಡಿಸುವುದು.
- ಶಾಖೆಗೆ ಬರುವ ಕಾಗದ ಪತ್ರಗಳನ್ನು ಸ್ವೀಕರಿಸಿ ಕೆಳಗಿನ ಅಧಿಕಾರಿ/ನೌಕರರುಗಳಿಗೆ ಹಂಚುವುದು.
- ಪ್ರತಿ ತಿಂಗಳು ಎಂ.ಎಂ.ಆರ್.ಸಭೆಗೆ ಹಾಜರಾಗಿ ವಿವಿಧ ವಿಷಯಗಳ ಬಗ್ಗೆ ಮುಂದಿನ ಕ್ರಮ ಜರುಗಿಸುವುದು.
- ವಿಧಾನ ಸಭೆ ಮತ್ತು ವಿಧಾನ ಪರಿಷತ್ತು ನಡವಳಿ ಪ್ರಶ್ನೆಗಳಿಗೆ ಉತ್ತರವನ್ನು ತಯಾರಿಸಿ ಮೇಲಾಧಿಕಾರಿಗಳಿಗೆ ಸಲ್ಲಿಸುವುದು.
- ಸಾಮಾನ್ಯ ಆಡಳಿತವನ್ನು ನಿರ್ವಹಿಸುವುದು.
- ಕಛೇರಿಯ ಕೆಲಸ ಕಾರ್ಯಗಳಲ್ಲಿ ನಿಯಮಾನುಸಾರ ಜವಾಬ್ದಾರಿಯುತವಾಗಿ ಕೆಲಸ ನಿರ್ವಹಿಸುವುದು.

ಎಂ.ಸತೀಶ್ ಕುಮಾರ್– ವಿಶೇಷ ಕರ್ತವ್ಯಾಧಿಕಾರಿ (ತಾಂತ್ರಿಕ–1)ಕಾವೇರಿ ರವರ ಕಾರ್ಯಭಾರ:

ವಿಶೇಷ ಕರ್ತವ್ಯಾಧಿಕಾರಿ(ತಾಂತ್ರಿಕ–1) ರವರು ಉಪಕಾರ್ಯದರ್ಶಿ(ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ) ಇವರ ಅಧೀನದಲ್ಲಿ ಬರುತ್ತಾರೆ. ಇವರ ಪ್ರಕಾರ್ಯಗಳು ಮತ್ತು ಕರ್ತವ್ಯಗಳು ಈ ಕೆಳಗಿನಂತಿದೆ.

- ಕಾವೇರಿ ಜಲವಿವಾದ, ಕೃಷ್ಣಾ ಜಲವಿವಾದ, ಕೆ.ಆರ್. ಸಾಗರದ ಬಳಿ ಇರುವ ಕರ್ನಾಟಕ ಇಂಜಿನಿಯರಿಂಗ್ ಸಂಶೋಧನ ಕೇಂದ್ರ ಮತ್ತು ಮುಖ್ಯ ಇಂಜಿನಿಯರ್ ಮಂಡಳಿಯ ಚಟುವಟಿಕೆಗಳು ಇವುಗಳಿಗೆ ಸಂಬಂಧಿಸಿದ ವಿಷಯಗಳ ನಿರ್ವಹಣೆ.
- ಕೃಷ್ಣಾ ಕೊಳ್ಳದ ಸಮಗ್ರ ಯೋಜನಾ ಸಮಿತಿಯ ಮತ್ತು ಅಣೆಕಟ್ಟುಗಳ ಸುರಕ್ಷತಾ ಪುನರಾವಲೋಕನಾ ಸಮಿತಿಯ ಸದಸ್ಯ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸುವುದು.
- ಉಪಕಾರ್ಯದರ್ಶಿ(ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ) ರವರಿಗೆ ಶಾಖೆಗೆ ಸಂಬಂಧಿಸಿದ ವಿವರಗಳನ್ನು ಮತ್ತು ಮಾಹಿತಿಯನ್ನು ಸಿಬ್ಬಂಧಿಯ ಸಹಕಾರದೊಂದಿಗೆ ಸಲ್ಲಿಸುವ ಮೂಲಕ ಅವರಿಗೆ ನೆರವಾಗುವುದು.
- ಮೇಲೆ ಹೇಳಿರುವ ಎಲ್ಲಾ ಕಾರ್ಯಭಾರಗಳ ಉಸ್ತುವಾರಿ, ಪರಿಶೀಲನೆ, ವಿಲೇವಾರಿ, ಮೇಲಾಧಿಕಾರಿಗಳು ನೀಡುವ ಆದೇಶಗಳ ಪರಿಪಾಲನೆ, ಮೇಲಾಧಿಕಾರಿಗಳು, ಮಾನ್ಯ ಸಚಿವರುಗಳು ಮತ್ತು ಮಾನ್ಯ ಮುಖ್ಯ ಮಂತ್ರಿಗಳು ನೆರವೇರಿಸುವ ಸಂಬಂಧಿತ ವಿಷಯಗಳ ಸಭೆಗಳ ನಿರ್ವಹಣೆ ಮತ್ತು ಸಚಿವ ಸಂಪುಟದ ವಿಷಯಗಳನ್ನು ಇತ್ಯಾದಿ ನಿರ್ವಹಿಸುವುದು.

ಶ್ರೀ ಎನ್.ಆರ್.ವಿಜಯಸಾರಥಿ, ವಿಶೇಷ ಕರ್ತವ್ಯಾಧಿಕಾರಿ (ತಾಂತ್ರಿಕ)ಎಂಎಂಐ–2 & 3 ರವರ ಕಾರ್ಯಭಾರ:–

ವಿಶೇಷ ಕರ್ತವ್ಯಾಧಿಕಾರಿ(ತಾಂತ್ರಿಕ)ಎಂಎಂಐ–2 & 3 ರವರು ಉಪಕಾರ್ಯದರ್ಶಿ(ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ) ಇವರ ಅಧೀನದಲ್ಲಿ ಬರುತ್ತಾರೆ. ಇವರ ಪ್ರಕಾರ್ಯಗಳು ಮತ್ತು ಕರ್ತವ್ಯಗಳು ಈ ಕೆಳಗಿನಂತಿದೆ.

- ಕಾವೇರಿ ನೀರಾವರಿ ನಿಗಮ ನಿಯಮಿತಕ್ಕೆ ಸಂಬಂಧಿಸಿದ ವಿಷಯಗಳ ನಿರ್ವಹಣೆ.
- ತುಮಕೂರು ಮತ್ತು ಗೊರೂರಿನ ಕಾವೇರಿ ಕೊಳ್ಳ (ನೀರಾವರಿ–ದಕ್ಷಿಣ ಮತ್ತು ಹೇಮಾವತಿ ಯೋಜನೆ) ವಿಷಯಗಳಿಗೆ ಸಂಬಂಧಿಸಿದ ಹಾಗೂ ಕೆಲಸ ಕಾರ್ಯಗಳ ನಿರ್ವಹಣೆ.
- ತಾಂತ್ರಿಕ ಸಲಹಾ ಸಮಿತಿ, ಅರ್ಜಿ ಸಮಿತಿ ಮತ್ತು ಸಾರ್ವಜನಿಕ ಲೆಕ್ಕ ಪತ್ರ ಸಮಿತಿ ಇವುಗಳಿಗೆ ಸಂಬಂಧಿಸಿದ ವಿಷಯಗಳ ಮತ್ತು ಕೆಲಸ ಕಾರ್ಯಗಳ ನಿರ್ವಹಣೆ.
- ಉಪಕಾರ್ಯದರ್ಶಿ(ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ) ರವರಿಗೆ ಶಾಖೆಗೆ ಸಂಬಂಧಿಸಿದ ವಿವರಗಳನ್ನು ಮತ್ತು ಮಾಹಿತಿಯನ್ನು ಸಿಬ್ಬಂಧಿಯ ಸಹಕಾರದೊಂದಿಗೆ ಸಲ್ಲಿಸುವ ಮೂಲಕ ಅವರಿಗೆ ನೆರವಾಗುವುದು.

- ❖ ಮೇಲೆ ಹೇಳಿರುವ ಎಲ್ಲಾ ಕಾರ್ಯಭಾರಗಳ ನಿರ್ವಹಣೆ, ಉಸ್ತುವಾರಿ ಮತ್ತು ವಿಲೇವಾರಿ, ಮೇಲಾಧಿಕಾರಿಗಳು ನೀಡುವ ಆದೇಶಗಳ ಪರಿಪಾಲನೆ, ಮಾನ್ಯ ಸಚಿವರುಗಳು ಮತ್ತು ಮಾನ್ಯ ಮುಖ್ಯ ಮಂತ್ರಿಗಳು ನೆರವೇರಿಸುವ ಸಂಬಂಧಿತ ವಿಷಯಗಳ ಸಭೆಗಳ ನಿರ್ವಹಣೆ, ಸಚಿವ ಸಂಪುಟದ ವಿಷಯಗಳು ಮತ್ತು ವಿಧಾನ ಸಭೆ ಮತ್ತು ವಿಧಾನ ಪರಿಷತ್ತಿನ ಪ್ರಶ್ನೆಗಳು, ಗಮನ ಸೆಳೆಯುವ ಸೂಚನೆಗಳು, ಶೂನ್ಯ ವೇಳೆಯ ವಿಷಯ ಮತ್ತು ನಿಯಮ 351 ರ ಬಗ್ಗೆ ನಿರ್ವಹಣೆ, ನಿಗಮೇತರ ವಲಯಗಳಿಗೆ ಹಣ ಬಿಡುಗಡೆ ಸಂಬಂಧಿಸಿದಂತೆ ಆರ್ಥಿಕ ಇಲಾಖೆ ಹಾಗೂ ವಲಯಗಳೊಡನೆ ಪತ್ರ ವ್ಯವಹಾರ, 3054 ಲೆಕ್ಕ ಶೀರ್ಷಿಕೆ ಅಡಿಯಲ್ಲಿ ರಸ್ತೆ ಕಾಮಗಾರಿಗಳ ಬಗ್ಗೆ, ಇತ್ಯಾದಿ.

ಸಿಬ್ಬಂಧಿಗಳ ಕಾರ್ಯಭಾರ:–

ಸಿಬ್ಬಂಧಿಯು ಇಲಾಖೆಯ ಆಧಾರ ಸ್ಥಂಭವಾಗಿರುತ್ತಾರೆ. ಸಚಿವಾಲಯದ ಕೈಪಿಡಿಯಲ್ಲಿ ನಿಗಧಿಪಡಿಸಿರುವ ಮಾನದಂಡಗಳು, ವ್ಯವಹಾರ ನಿರ್ವಹಣೆ ನಿಯಮಗಳು, ಲೋಕೋಪಯೋಗಿ ಸಂಹಿತೆ ಸಂಪುಟ I ಮತ್ತು II , ನೀರಾವರಿ ಕಾಯಿದೆ ಮತ್ತು ನಿಯಮಗಳು, ಕಾಡಾ ಕಾಯಿದೆ ಮತ್ತು ನಿಯಮಗಳು, ವೃಂದ ಮತ್ತು ನೇಮಕ ನಿಯಮಾವಳಿಗಳು, ಕರ್ನಾಟಕ ನಾಗರೀಕ ಸೇವಾ ನಿಯಮಗಳು ಮತ್ತು ವರ್ತನೆ ನಿಯಮಗಳು, ಸುತ್ತೋಲೆ ಮತ್ತು ಕಾಲ ಕಾಲಕ್ಕೆ ಹೊರಡಿಸಿದ ಸರ್ಕಾರಿ ಆದೇಶಗಳ ಪ್ರಕಾರ ದೈನಂದಿನ ಸರ್ಕಾರಿ ಕೆಲಸ ಕಾರ್ಯಗಳನ್ನು ನಿರ್ವಹಿಸಿಕೊಂಡು ಹೋಗುವಲ್ಲಿ ಅವರುಗಳು ತಮ್ಮ ನಿಕಟ ಮೇಲಧಿಕಾರಿಗಳಿಗೆ ನೆರವು ನೀಡುವುದು.

(3) ನಿರ್ಣಯ ತೆಗೆದುಕೊಳ್ಳುವ ಪ್ರಕ್ರಿಯೆ, ಉಸ್ತುವಾರಿ ಮತ್ತು ಹೊಣೆಗಾರಿಕೆ ಹಾಗೂ ವಿವಿಧ ಹಂತಗಳು:–

ಪ್ರಧಾನ ಕಾರ್ಯದರ್ಶಿ ಮತ್ತು ಕಾರ್ಯದರ್ಶಿಯವರು ಜಲಸಂಪನ್ಮೂಲ ಇಲಾಖೆಯ ಸಚಿವರ ಸಮನ್ವಯ ಮತ್ತು ಸಹಕಾರದೊಂದಿಗೆ ಜಲಸಂಪನ್ಮೂಲ ಇಲಾಖೆಯ ನಿರ್ಣಯ ತೆಗೆದುಕೊಳ್ಳುವ ಪ್ರಕ್ರಿಯೆಗೆ ಸಂಬಂಧಪಟ್ಟವರಾಗಿರುತ್ತಾರೆ.

ಸಂಘಟನೆಯ ವಿವರಗಳಂತೆ ಅಪ್ಪಣೆ / ಆದೇಶ ಮಾಡುವಲ್ಲಿ ಏಕತೆ ಇದೆ. ಅಧೀನ ಕಾರ್ಯದರ್ಶಿಗಳು ಮತ್ತು ವಿಶೇಷ ಕರ್ತವ್ಯಾಧಿಕಾರಿಗಳು ಸಂಬಂಧಪಟ್ಟ ಉಪ ಕಾರ್ಯದರ್ಶಿಗಳಿಂದ ಮತ್ತು ಜಂಟಿ ಕಾರ್ಯದರ್ಶಿಗಳಿಂದ ಆದೇಶಗಳನ್ನು ಪಡೆಯುತ್ತಾರೆ. ಪ್ರತಿಯಾಗಿ ಅವರು ಕಾರ್ಯದರ್ಶಿಗಳಿಗೆ ಹೊಣೆಗಾರರಾಗಿರುತ್ತಾರೆ. ಪ್ರಧಾನ ಕಾರ್ಯದರ್ಶಿ ಮತ್ತು ಕಾರ್ಯದರ್ಶಿಯವರು ಜಲಸಂಪನ್ಮೂಲ ಇಲಾಖೆಯ ಸಚಿವರಿಗೆ ಹೊಣೆಗಾರರಾಗಿರುತ್ತಾರೆ.

(4) ಇಲಾಖೆಯ ಕೆಲಸಕಾರ್ಯಗಳ ನಿರ್ವಹಣೆಗೆ ಇಲಾಖೆಯು ಅಳವಡಿಸಿಕೊಂಡಿರುವ ಮಾನದಂಡಗಳು:–

ಸಚಿವಾಲಯದ ಕೈಪಿಡಿಯು ಜಲಸಂಪನ್ಮೂಲ ಇಲಾಖೆಯ ದೈನಂದಿನ ಚಟುವಟಿಕೆಗಳಿಗೆ ಮಾರ್ಗದರ್ಶನವಾಗಿದೆ. ಸಚಿವಾಲಯದ ಕೈಪಿಡಿಯು ವಿಸ್ತೃತವಾದ ಮಾನದಂಡಗಳನ್ನು ಒಳಗೊಂಡಿದ್ದು ಜಲಸಂಪನ್ಮೂಲ ಇಲಾಖೆಯ ಸಿಬ್ಬಂದಿಯು ತಮ್ಮ ಕೆಲಸ ಕಾರ್ಯಗಳನ್ನು ನಿರ್ವಹಿಸುವಾಗ ಸದರಿ ಮಾನದಂಡಗಳನ್ನು ಅನುಸರಿಸಬೇಕಾಗುತ್ತದೆ. ಸಚಿವಾಲಯದ ಕೈಪಿಡಿಯಲ್ಲದೇ ಸಚಿವಾಲಯದ ಸಿಬ್ಬಂಧಿಯು ಅಸ್ತಿತ್ವದಲ್ಲಿರುವ ಇತರೇ ಸಂಹಿತೆ ಮತ್ತು ನಿಯಮಗಳಲ್ಲಿನ ಪ್ರಾವಿಧಾನಗಳನ್ನು (Provision) ಅನುಸರಿಸಬೇಕಾಗುತ್ತದೆ.

(5) ಕೆಲಸ ಕಾರ್ಯಗಳ ನಿರ್ವಹಣೆಗೆ ನಿಯಮಗಳು, ವಿನಿಯಮನಗಳು (Regulations), ಸೂಚನೆಗಳು, ಕೈಪಿಡಿಗಳು ಮತ್ತು ದಾಖಲೆಗಳು ಜಲಸಂಪನ್ಮೂಲ ಇಲಾಖೆಯ ನಿಯಂತ್ರಣದಲ್ಲಿರುತ್ತವೆ:–

ಸಚಿವಾಲಯದ ಕೈಪಿಡಿ ವ್ಯವಹಾರ ನಿರ್ವಹಣೆ ನಿಯಮಗಳು, ಲೋಕೋಪಯೋಗಿ ಸಂಹಿತೆ ಸಂಪುಟ I ಮತ್ತು II , ನೀರಾವರಿ ಕಾಯಿದೆ ಮತ್ತು ನಿಯಮಗಳು, ಕಾಡಾ ಕಾಯಿದೆ ಮತ್ತು ನಿಯಮಗಳು, ವೃಂದ ಮತ್ತು ನೇಮಕ ನಿಯಮಾವಳಿಗಳು, ಕರ್ನಾಟಕ ನಾಗರೀಕ ಸೇವಾ ನಿಯಮಗಳು ಮತ್ತು ವರ್ತನೆ ನಿಯಮಗಳು, ಸುತ್ತೋಲೆ ಮತ್ತು ಕಾಲ ಕಾಲಕ್ಕೆ ಹೊರಡಿಸಿದ ಸರ್ಕಾರಿ ಆದೇಶಗಳ ಮೂಲಕ ಜಲಸಂಪನ್ಮೂಲ ಇಲಾಖೆಯ ಕಾರ್ಯ ನಿರ್ವಹಣೆಯನ್ನು ಮಾಡಲಾಗುತ್ತದೆ.

(6) ಜಲಸಂಪನ್ಮೂಲ ಇಲಾಖೆಯ ನಿಯಂತ್ರಣದಲ್ಲಿ ಬರುವ ದಸ್ತಾವೇಜುಗಳು:–

ಈ ಕೆಳಕಂಡ ದಸ್ತಾವೇಜುಗಳು ಸಚಿವಾಲಯದ ಜಲಸಂಪನ್ಮೂಲ ಇಲಾಖೆಯ ನಿಯಂತ್ರಣದಲ್ಲಿ ಬರುತ್ತವೆ. ಅವುಗಳನ್ನು ವಾರ್ಷಿಕವಾಗಿ ಪ್ರಕಟಿಸಲಾಗುತ್ತದೆ.

- ❖ ವಾರ್ಷಿಕ ವರದಿ
- ❖ ನಿರ್ವಹಣಾ ಮುಂಗಡ ಪತ್ರ
- ❖ ಕರ್ನಾಟಕದಲ್ಲಿ ನೀರಾವರಿ

- ❖ ವಾರ್ಷಿಕ ಆಡಳಿತಾತ್ಮಕ ವರದಿ
- ❖ ವಾರ್ಷಿಕ ಯೋಜನೆ
- ❖ ಆಯವ್ಯಯ ದಸ್ತಾವೇಜು

ವಾರ್ಷಿಕ ವರದಿ:– ಈ ದಸ್ತಾವೇಜನ್ನು ಸಚಿವಾಲಯದ ಜಲಸಂಪನ್ಮೂಲ ಇಲಾಖೆಯಿಂದ ವಾರ್ಷಿಕವಾಗಿ ಪ್ರಕಟಿಸಲಾಗುತ್ತದೆ. ಈ ದಸ್ತಾವೇಜನ್ನು ಇಡೀ ಇಲಾಖೆಯ ಆರ್ಥಿಕ ಮತ್ತು ಭೌತಿಕ ಕಾರ್ಯಕ್ರಮಗಳನ್ನು ಮತ್ತು ಪ್ರಗತಿಯನ್ನು ಹಾಗೂ ಮುಂದಿನ ವರ್ಷದ ಕಾರ್ಯಕ್ರಮಗಳನ್ನು ಒಳಗೊಂಡಿರುತ್ತದೆ. ಇದಲ್ಲದೇ ಇದು ಪ್ರಗತಿಯಲ್ಲಿರುವ ಪ್ರತಿಯೊಂದು ಕಾಮಗಾರಿ ಯೋಜನೆಯ ಹಂತವನ್ನು ಒಳಗೊಂಡಿರುತ್ತದೆ.

ನಿರ್ವಹಣಾ ಮುಂಗಡ ಪತ್ರ:– ಭಾರತ ಸರ್ಕಾರದ ಆಡಳಿತಾತ್ಮಕ ಸುಧಾರಣೆಗಳ ಆಯೋಗವು 1977–78 ರಲ್ಲಿ ಶಿಫಾರಸ್ಸು ಮಾಡಿದ ಮೇರೆಗೆ ಈ ದಸ್ತಾವೇಜನ್ನು ಪರಿಚಯಿಸಲಾಗಿತ್ತು. ಈ ದಸ್ತಾವೇಜು, ಇಲಾಖೆಯ ಪ್ರತಿಯೊಂದು ಕಾರ್ಯಕ್ರಮ ಮತ್ತು ಚಟುವಟಿಕೆಯಡಿಯಲ್ಲಿ ಸಲ್ಲಿಸಿದ ಸೇವೆಗಳು ಹಾಗೂ ಪ್ರತಿಯೊಂದು ವಲಯವು ಕಾರ್ಯಗತಗೊಳಿಸಿದ ಕಾಮಗಾರಿಯ ಪ್ರಮಾಣ, ಹಲವು ಕಾರ್ಯಕ್ರಮಗಳ ಮತ್ತು ಚಟುವಟಿಕೆಗಳ ಅಂದಾಜು ವೆಚ್ಚ ಮತ್ತು ಯಾವ ಉದ್ದೇಶಗಳಿಗೆ ಮತ್ತು ಗುರಿಗಳಿಗೆ ನಿಧಿಗಳು ಅಗತ್ಯವಿದೆ ಎಂಬುದನ್ನು ಸಾದರಪಡಿಸುತ್ತದೆ.

ಕರ್ನಾಟಕದಲ್ಲಿ ನೀರಾವರಿ:– ಸಚಿವಾಲಯದಿಂದ ಇದನ್ನು ವಾರ್ಷಿಕವಾಗಿ ಪ್ರಕಟಿಸಲಾಗುತ್ತಿದೆ. ಇದು ಕರ್ನಾಟಕದಲ್ಲಿ ಇಲ್ಲಿಯವರೆಗೂ ಸೃಷ್ಟಿಸಿದ ನೀರಾವರಿ ಸಾಮರ್ಥ್ಯ ಮತ್ತು ಅಂತಿಮವಾಗಿ ಸೃಜಿಸಬೇಕಾದಂತಹ ಸಾಮರ್ಥ್ಯ, ರಾಜ್ಯದಲ್ಲಿ ಬೃಹತ್ ಮತ್ತು ಮಧ್ಯಮ ನೀರಾವರಿ, ಸಣ್ಣ ನೀರಾವರಿ ಯೋಜನೆಗಳಲ್ಲದೇ ಮತ್ತು ಏತ ನೀರಾವರಿ ಯೋಜನೆಗಳು, ರಾಜ್ಯದ ಏಳು ನದಿಗಳ ಪದ್ಧತಿಯಿಂದ ಬರುವ ಇಳುವರಿ, ಯೋಜನೆಗಳನ್ನು ಪೂರ್ಣಗೊಳಿಸಲು ಇಲಾಖೆಯು ಹಮ್ಮಿಕೊಂಡ ಹಲವಾರು ಕಾರ್ಯಕ್ರಮಗಳು, ಪ್ರತಿಯೊಂದು ಯೋಜನೆಯ ಸಂಕ್ಷಿಪ್ತ ಚರ್ಚಿತ ಅಂಶಗಳು, ಆರ್ಥಿಕ ವರ್ಷದ ಅಂತ್ಯದಲ್ಲಿ ಕಾಮಗಾರಿಗಳ ಹಂತ ಮತ್ತು ಮುಂದಿನ ವರ್ಷದ ಕಾರ್ಯಕ್ರಮಗಳನ್ನು ಈ ಎಲ್ಲಾ ಅಂಶಗಳನ್ನು ಒಳಗೊಂಡಂತೆ ತೋರಿಸುವ ಇದೊಂದು ಕ್ರೋಢೀಕೃತ ದಸ್ತಾವೇಜು ಆಗಿರುತ್ತದೆ.

ವಾರ್ಷಿಕ ಆಡಳಿತಾತ್ಮಕ ವರದಿ:– ಈ ದಸ್ತಾವೇಜನ್ನು ವಾರ್ಷಿಕವಾಗಿ ಪ್ರಕಟಿಸಲಾಗುತ್ತದೆ. ಇದು ಪ್ರತಿಯೊಂದು ವಲಯಗಳ ಸಂಘಟನೆಯ ಬಗ್ಗೆ ವಿವರಗಳನ್ನು ಒಳಗೊಂಡಿರುತ್ತದೆ. ಆಡಳಿತಾತ್ಮಕ ವರದಿಯಲ್ಲಿ ಸಚಿವಾಲಯದ ಮತ್ತು ಪ್ರತಿಯೊಂದು ವಲಯಗಳ ಇಲಾಖಾ ಮುಖ್ಯಸ್ಥರು ಹೊಂದಿದ ಹುದ್ದೆಯ ಅವಧಿಯನ್ನು ಇದರಲ್ಲಿ ಸೂಚಿಸಲಾಗಿರುತ್ತದೆ.

ವಾರ್ಷಿಕ ಯೋಜನೆ:– ಈ ದಸ್ತಾವೇಜು, ಯೋಜನಾವಾರು ಮತ್ತು ಶೀರ್ಷಿಕೆವಾರು ಇಲಾಖೆಗೆ ಅಗತ್ಯವಾಗಿ ಬೇಕಾಗಿರುವ ನಿಧಿಗಳ ಬಗ್ಗೆ ವಿವರವಾದ ಮಾಹಿತಿಯನ್ನು ಒಳಗೊಂಡಿರುತ್ತದೆ. ಇಲಾಖೆಯ ವಾರ್ಷಿಕ ಯೋಜನೆಯನ್ನು ತಯಾರಿಸುವಲ್ಲಿ ಜಲಸಂಪನ್ಮೂಲ ಇಲಾಖೆಯು ಯೋಜನಾ ಇಲಾಖೆಗೆ ಸಹಕರಿಸುತ್ತದೆ. ಈ ದಸ್ತಾವೇಜು, ಮುಂದುವರೆದ ಮತ್ತು ಹೊಸ ಯೋಜನೆಗಳೆರಡನ್ನು ಸೇರಿದಂತೆ ಪ್ರತಿ ಯೋಜನಾ ಅವಧಿಯಲ್ಲಿ ಹಂಚಿಕೆ ಮಾಡಿದ ನಿಧಿಗಳ ಬಗ್ಗೆ ಸಂಪೂರ್ಣವಾದ ವಿವರಗಳನ್ನು ನೀಡುತ್ತದೆ.

ಆಯವ್ಯಯ ದಸ್ತಾವೇಜು:– ಇದೊಂದು ಕರಡು ದಸ್ತಾವೇಜಾಗಿದೆ. ಇದನ್ನು ಯೋಜನಾ ಇಲಾಖೆಯು ಬಿಡುಗಡೆ ಮಾಡಿದ ತರುವಾಯ ಇಲಾಖೆಯ ವಾರ್ಷಿಕ ಯೋಜನೆಯನ್ನು ಪ್ರಕಟಿಸಲಾಗುತ್ತದೆ. ಇದು ಇಲಾಖೆಯು ನಡೆಸಿದ ಪೂರ್ವಭಾವಿ ಸಭೆಗಳಲ್ಲಿ ನಿಧಿಗಳ ಅಗತ್ಯತೆಗಳ ಬಗ್ಗೆ ಚರ್ಚಿತಗೊಂಡ ತರುವಾಯ ಆಯವ್ಯಯದ ದಸ್ತಾವೇಜನ್ನು ತಯಾರಿಸಿ ಆರ್ಥಿಕ ಇಲಾಖೆಗೆ ಕಳುಹಿಸಲಾಗುತ್ತದೆ. ಈ ದಸ್ತಾವೇಜು ವಾಸ್ತವವಾಗಿ ಅಗತ್ಯವಿರುವ ನಿಧಿಗಳ ಬಗ್ಗೆ ಮಾಹಿತಿಯನ್ನೊಳಗೊಂಡಿರುತ್ತದೆ.

(7) ಜಲಸಂಪನ್ಮೂಲ ಇಲಾಖೆಗೆ ಅನ್ವಯಿಸುವ ಕಾರ್ಯ ನೀತಿಯ ರಚನೆ ಮತ್ತು ಕಾರ್ಯಾನುಷ್ಠಾನದ ಸಂಬಂಧ ಸಾರ್ವಜನಿಕರೊಂದಿಗೆ ಸಮಾಲೋಚಿಸಲು ಅಸ್ತಿತ್ವದಲ್ಲಿರುವ ವ್ಯವಸ್ಥೆ:–

ನಿಗಧಿತ ನೀರಾವರಿ ಸಾಮರ್ಥ್ಯವನ್ನು ಸೃಜಿಸಲು ಮತ್ತು ಮುಂದುವರೆದ ನೀರಾವರಿ ಯೋಜನೆಗಳನ್ನು ಶೀಘ್ರವಾಗಿ ಪೂರ್ಣಗೊಳಿಸಲು ಜಲ ಸಂಪನ್ಮೂಲ ಇಲಾಖೆಯಡಿಯಲ್ಲಿ ಕೃಷ್ಣಾ ಭಾಗ್ಯ ಜಲನಿಗಮ ನಿಯಮಿತ, ಕರ್ನಾಟಕ ನೀರಾವರಿ ನಿಗಮ ನಿಯಮಿತ ಮತ್ತು ಕಾವೇರಿ ನೀರಾವರಿ ನಿಗಮ ನಿಯಮಿತ ಎಂಬ ಮೂರು ವಿಶೇಷ ಉದ್ದೇಶ ವಾಹಕಗಳನ್ನು (Special Purpose Vehicles) ಸ್ಥಾಪಿಸಲಾಗಿದೆ. ಜಲಸಂಪನ್ಮೂಲ ಇಲಾಖೆಯ ಕಾರ್ಯದರ್ಶಿ ಯವರು ಈ ಮೂರು ನಿಗಮಗಳಿಗೆ ನಿರ್ದೇಶಕರಾಗಿರುತ್ತಾರೆ. ಕಾರ್ಯನೀತಿಗಳನ್ನು ರಚಿಸುವಾಗ ಮತ್ತು ಅನುಷ್ಠಾನಗೊಳಿಸುವಾಗ ಈ ಮೂರು

ನಿಗಮಗಳು ನೀಡಿದಂತಹ ಸಲಹೆಗಳನ್ನು ಪರಿಗಣಿಸಲಾಗುತ್ತದೆ. ತಾಂತ್ರಿಕ ವಿಷಯಗಳಲ್ಲಿ ಸಭೆಗಳು ನಡೆಯುತ್ತಿರುವಾಗಲಿ ಅಥವಾ ಅನ್ಯತವಾಗಿಯಾಗಲಿ ನಿಗಮಗಳೊಂದಿಗೆ ಸಮಾಲೋಚಿಸಲಾಗುತ್ತದೆ.

(8) ಜಲಸಂಪನ್ಮೂಲ ಇಲಾಖೆಯಿಂದ ರಚಿಸಲ್ಪಟ್ಟ ಮಂಡಳಿಗಳು, ಕೌನ್ಸಿಲ್‌ಗಳು (Councils) ಸಮಿತಿಗಳು ಮತ್ತು ಇತರೆ ನಿಕಾಯಗಳು (bodies):–

ಅಧಿಕಾರೇತರ ಮತ್ತು ಅಧಿಕಾರವುಳ್ಳ ಸದಸ್ಯರನ್ನೊಳಗೊಂಡಂತೆ ಜಲಸಂಪನ್ಮೂಲ ಇಲಾಖೆಯು ಹಲವಾರು ಮಂಡಳಿಗಳನ್ನು, ಕೌನ್ಸಿಲ್‌ಗಳನ್ನು, ಸಮಿತಿಗಳನ್ನು ಮತ್ತು ನಿಕಾಯಗಳನ್ನು ಸ್ಥಾಪಿಸಿದೆ.

ಜಲಸಂಪನ್ಮೂಲ ಇಲಾಖೆಯು ಸ್ಥಾಪಿಸಲ್ಪಟ್ಟಂತಹ ಮಂಡಳಿಗಳು, ಕೌನ್ಸಿಲ್‌ಗಳು, ಸಮಿತಿಗಳು ಮತ್ತು ನಿಕಾಯಗಳು ಈ ಕೆಳಗಿನಂತಿವೆ.

- ❖ ನೀರಾವರಿ ಸಮಾಲೋಚನಾ ಸಮಿತಿ
- ❖ ತಾಂತ್ರಿಕ ಸಲಹಾ ಸಮಿತಿ
- ❖ ಸಮಗ್ರ ಯೋಜನಾ ಸಮಿತಿ
- ❖ ಬೃಹತ್ ನೀರಾವರಿ ಯೋಜನಾ ನಿಯಂತ್ರಣಾ ಮಂಡಳಿ

ನೀರಾವರಿ ಸಮಾಲೋಚನಾ ಸಮಿತಿ:–

ಪ್ರತಿಯೊಂದು ಬೃಹತ್ ಮತ್ತು ಮಧ್ಯಮ ನೀರಾವರಿ ಯೋಜನೆಗಳಡಿಯಲ್ಲಿ ನೀರಾವರಿ ಸಮಾಲೋಚನ ಸಮಿತಿಯನ್ನು ಸ್ಥಾಪಿಸಲಾಗಿದೆ. ಸಂಬಂಧಪಟ್ಟ ಯೋಜನೆಯ ಅಧೀಕ್ಷಕ ಅಭಿಯಂತರರು ಸಮಿತಿಯಲ್ಲಿ ಸದಸ್ಯ ಕಾರ್ಯದರ್ಶಿಯಾಗಿರುತ್ತಾರೆ. ಅಧಿಕಾರೇತರ ಸದಸ್ಯರುಗಳಲ್ಲಿ ರೈತರ ಪ್ರತಿನಿಧಿಗಳೂ ಸಹ ಒಳಗೊಂಡಿರುತ್ತಾರೆ. ನೀರಾವರಿ ಸಲಹಾ ಸಮಿತಿಯ ಪ್ರಕಾರ್ಯವೇನೆಂದರೆ ಪ್ರತಿಯೊಂದು ಋತುಗಳ ಅವಧಿಯಲ್ಲಿ ನೀರಿನ ನಿರ್ವಹಣೆ ಬಗ್ಗೆ ನಿರ್ದೇಶನ ಮತ್ತು ಶಿಫಾರಸ್ಸನ್ನು ಮಾಡುವುದಾಗಿದೆ.

ತಾಂತ್ರಿಕ ಸಲಹಾ ಸಮಿತಿ:–

ಕಾರ್ಯದರ್ಶಿಯವರು ತಾಂತ್ರಿಕ ಸಲಹಾ ಸಮಿತಿಯ ಸದಸ್ಯರಾಗಿರುತ್ತಾರೆ. ಈ ಸಮಿತಿಯ ಏಳು ಸದಸ್ಯರುಗಳನ್ನು ಹೊಂದಿದ್ದು ಅವರಲ್ಲಿ ಇಬ್ಬರು ಅಧಿಕಾರಿಗಳು ಮತ್ತು ಐದು ಮಂದಿ ಅಧಿಕಾರೇತರ ಸದಸ್ಯರಿರುತ್ತಾರೆ. ಅಧಿಕಾರೇತರ ಸದಸ್ಯರುಗಳು ನಿವೃತ್ತ ತಾಂತ್ರಿಕ ಪರಿಣಿತರಾಗಿದ್ದು, ಅವರುಗಳು ಜಲಸಂಪನ್ಮೂಲ ಇಲಾಖೆಯಡಿಯಲ್ಲಿ ಅಮೂಲ್ಯವಾದ ಸೇವೆಯನ್ನು ಸಲ್ಲಿಸಿರುತ್ತಾರೆ. ತಾಂತ್ರಿಕ ಸಲಹಾ ಸಮಿತಿಯ ಸಭೆಗಳ ಸಮಯದಲ್ಲಿ ಮೂಡಿ ಬಂದ ಸಲಹೆಗಳು ಮತ್ತು ಶಿಫಾರಸ್ಸುಗಳನ್ನು ಆಧರಿಸಿ ಸರ್ಕಾರವು ಆಡಳಿತಾತ್ಮಕ ಅನುಮೋದನೆಯನ್ನು ನೀಡುತ್ತದೆ.

ತಾಂತ್ರಿಕ ಸಲಹಾ ಸಮಿತಿಯ ಪ್ರಕಾರ್ಯಗಳು ಕೆಳಗಿನಂತಿವೆ:–

- ❖ ಎಲ್ಲಾ ಬೃಹತ್ ಮತ್ತು ಮಧ್ಯಮ ನೀರಾವರಿ ಯೋಜನೆಗಳ ಉಸ್ತುವಾರಿ ಮತ್ತು ಯೋಜನೆ
- ❖ ಆಡಳಿತಾತ್ಮಕ ಅನುಮೋದನೆ ಮತ್ತು ತಾಂತ್ರಿಕ ಮಂಜೂರಾತಿ ನೀಡುವ ಮುನ್ನ ಎಲ್ಲಾ ಬೃಹತ್ ಮತ್ತು ಮಧ್ಯಮ ನೀರಾವರಿ ಕಾರ್ಯ ಯೋಜನೆಗಳ ಅಂದಾಜುಗಳನ್ನು ಪರಿಶೋಧಿಸುವುದು.
- ❖ 2.50 ಕೋಟಿ ರೂ.ಗಳು ಮತ್ತು ಅದಕ್ಕಿಂತ ಹೆಚ್ಚಿನ ಎಲ್ಲಾ ಬೃಹತ್ ಮತ್ತು ಮಧ್ಯಮ ನೀರಾವರಿ ಯೋಜನಾ ಕಾಮಗಾರಿಗಳ ಗುತ್ತಿಕೆದಾರರುಗಳ ಕ್ಲೇಮುಗಳು ಮತ್ತು ಟೆಂಡರುಗಳು.
- ❖ ಈ ಮೇಲ್ಕಂಡ ವಿಷಯವಾಗಿ ಬೃಹತ್ ನೀರಾವರಿ ಯೋಜನಾ ನಿಯಂತ್ರಣಾ ಮಂಡಳಿಗೆ ತಾಂತ್ರಿಕ ಸಮಿತಿಯು ಸೂಕ್ತವಾದ ಶಿಫಾರಸ್ಸುಗಳನ್ನು ಮಾಡುವುದು.

ತಾಂತ್ರಿಕ ಸಲಹಾ ಸಮಿತಿಯ ಅಧಿಕಾರಿ / ಅಧಿಕಾರೇತರ ಸದಸ್ಯರುಗಳ ಪಟ್ಟಿ

ಕ್ರ.ಸಂ.	ಹೆಸರುಗಳು	ಅಧಿಕಾರಿ / ಅಧಿಕಾರೇತರ	ಪದನಾಮ
1.	ಶ್ರೀ ಡಿ.ಎನ್. ದೇಸಾಯಿ, ನಿವೃತ್ತ ಕಾರ್ಯದರ್ಶಿ	ಅಧಿಕಾರೇತರ	ಅಧ್ಯಕ್ಷರು
2.	ಶ್ರೀ ಕೆ. ಶಿವಶಂಕರ್, ನಿವೃತ್ತ ಕಾರ್ಯದರ್ಶಿ, ಜಲ ಸಂಪನ್ಮೂಲ ಇಲಾಖೆ	ಅಧಿಕಾರೇತರ	ಸದಸ್ಯರು

ಕ್ರ.ಸಂ.	ಹೆಸರುಗಳು	ಅಧಿಕಾರಿ / ಅಧಿಕಾರೇತರ	ಪದನಾಮ
3.	ಶ್ರೀ ಎನ್.ಆರ್. ವೆಂಕಟೇಶ ಪ್ರಸಾದ್ ನಿವೃತ್ತ ಕಾರ್ಯದರ್ಶಿ, ಜಲ ಸಂಪನ್ಮೂಲ ಇಲಾಖೆ	ಅಧಿಕಾರೇತರ	ಸದಸ್ಯರು
4.	ಶ್ರೀ ಎಲ್. ಬಸವರಾಜ್, ನಿವೃತ್ತ ಕಾರ್ಯದರ್ಶಿ	ಅಧಿಕಾರೇತರ	ಸದಸ್ಯರು
5.	ಡಾ: ಎ. ಶ್ರೀಧರನ್, ನಿವೃತ್ತ ಪ್ರೊಫೆಸರ್, IISc.	ಅಧಿಕಾರೇತರ	ಸದಸ್ಯರು
6.	ಕಾರ್ಯದರ್ಶಿ, ಜಲ ಸಂಪನ್ಮೂಲ ಇಲಾಖೆ	ಅಧಿಕಾರಿ	ಸದಸ್ಯರು
7.	ವಿಶೇಷ ಕರ್ತವ್ಯಾಧಿಕಾರಿ (ತಾಂತ್ರಿಕ–ಎಂಎಂಐ–3) ಜಲ ಸಂಪನ್ಮೂಲ ಇಲಾಖೆ	ಅಧಿಕಾರಿ	ಸದಸ್ಯರು

ಸಮಗ್ರ ಯೋಜನಾ ಸಮಿತಿ:–

ಸಮಗ್ರ ಯೋಜನಾ ಸಮಿತಿಯು, ಅಧಿಕಾರಿಗಳು ಮತ್ತು ಅಧಿಕಾರೇತರ ಸದಸ್ಯರುಗಳೆರಡನ್ನು ಒಳಗೊಂಡಿದೆ. ಅಧಿಕಾರೇತರು ಸದಸ್ಯರುಗಳು ನಿವೃತ್ತ ಕಾರ್ಯದರ್ಶಿಯವರ ಸ್ಥಾನದಲ್ಲಿ ಬರುವಂತಹ ತಾಂತ್ರಿಕ ಪರಿಣಿತರಾಗಿರುತ್ತಾರೆ. ಸಮಗ್ರ ಯೋಜನಾ ಸಮಿತಿಯ ಪ್ರಕಾರ್ಯವು ಕೃಷ್ಣಾ, ಕಾವೇರಿ ಮತ್ತು ಇತರೆ ಕೊಳ್ಳಗಳ ನೀರಿನ ಹಂಚಿಕೆಯನ್ನು ದಕ್ಷವಾಗಿ ಮತ್ತು ಪರಿಣಾಮಕಾರಿಯಾಗಿ ಹಂಚಿಕೆ ಮಾಡುವುದರೊಂದಿಗೆ ಬೃಹತ್ ಮತ್ತು ಮಧ್ಯಮ ನೀರಾವರಿ ಯೋಜನೆಗಳನ್ನು ಗುರುತಿಸುವಲ್ಲಿ ನಿರ್ದೇಶನ ಮತ್ತು ಶಿಫಾರಸ್ಸುಗಳನ್ನು ನೀಡುವುದಾಗಿದೆ.

ಬೃಹತ್ ನೀರಾವರಿ ಯೋಜನಾ ನಿಯಂತ್ರಣಾ ಮಂಡಳಿ:–

ಗೌರವಾನ್ವಿತ ಮುಖ್ಯ ಮಂತ್ರಿಗಳು ಮತ್ತು ಜಲಸಂಪನ್ಮೂಲ ಇಲಾಖೆಯ ಗೌರವಾನ್ವಿತ ಸಚಿವರು ಕ್ರಮವಾಗಿ ಬೃಹತ್ ನೀರಾವರಿ ಯೋಜನಾ ನಿಯಂತ್ರಣಾ ಮಂಡಳಿಯ ಅಧ್ಯಕ್ಷರು ಮತ್ತು ಉಪಾಧ್ಯಕ್ಷರಾಗಿರುತ್ತಾರೆ. ಈ ಸಮಿತಿಯು 14 ಸದಸ್ಯರುಗಳನ್ನೊಳಗೊಂಡಿದ್ದು ಅವರುಗಳಲ್ಲಿ ನಾಲ್ಕು ಅಧಿಕಾರಿಗಳು ಒಂಬತ್ತು ಅಧಿಕಾರೇತರ ಸದಸ್ಯರಿರುತ್ತಾರೆ.

ಬೃಹತ್ ನೀರಾವರಿ ಯೋಜನಾ ನಿಯಂತ್ರಣಾ ಮಂಡಳಿಯ ಪ್ರಕಾರ್ಯಗಳು ಈ ಕೆಳಗಿನಂತಿವೆ:

- ❖ ಬೃಹತ್ ಮತ್ತು ಮಧ್ಯಮ ನೀರಾವರಿ ವಿಷಯದ ಟೆಂಡರುಗಳು ಮತ್ತು ಕ್ಲೇಮುಗಳು, ಅಂದಾಜುಗಳು, ಉಸ್ತುವಾರಿ ಮತ್ತು ಯೋಜನೆ ಈ ಎಲ್ಲಾ ವಿಷಯಗಳಲ್ಲಿ ತಾಂತ್ರಿಕ ಸಮಿತಿಯು ಪರಾಮರ್ಶಿಸಿ ಶಿಪಾರಸ್ಸನ್ನು ನೀಡುವುದು.
- ❖ ನೀರಾವರಿ ವಲಯದ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಮಂಡಳಿಯು ಚರ್ಚಿಸಲು ಅಧಿಕಾರ ಹೊಂದಿರುತ್ತದೆಯಲ್ಲದೇ ಮತ್ತು ತಾಂತ್ರಿಕ ಸಮಿತಿಯ ಅಧ್ಯಕ್ಷರ ಸಲಹೆಗಾಗಿ ಯಾವುದೇ ಕಡತವನ್ನು ಕಳುಹಿಸಲು ನಿರ್ದೇಶನ ನೀಡಬಹುದಾಗಿದೆ.
- ❖ ವ್ಯವಹರಣೆ ನಿಯಮಗಳ ಪ್ರಕಾರ ಸಚಿವ ಸಂಪುಟಕ್ಕೆ ತೆಗೆದುಕೊಂಡು ಹೋಗುವ ಪ್ರಕರಣಗಳನ್ನು ಹೊರತುಪಡಿಸಿ ಮಂಡಳಿಯು ಅನುಮೋದನೆ ನೀಡಿದ ವಿಷಯಗಳ ಬಗ್ಗೆ ಅವಶ್ಯವಿರುವ ಸರ್ಕಾರಿ ಆದೇಶಗಳನ್ನು ಜಲಸಂಪನ್ಮೂಲ ಇಲಾಖೆಯು ನೇರವಾಗಿ ಹೊರಡಿಸತಕ್ಕದ್ದು.
- ❖ ಸಚಿವ ಸಂಪುಟದ ಅನುಮೋದನೆ ಅತ್ಯಗತ್ಯವಿರುವ ಪ್ರಕರಣಗಳಲ್ಲಿ ಮಂಡಳಿಯು ಅನುಮೋದನೆ ನೀಡಿದ ತರುವಾಯ ಜಲಸಂಪನ್ಮೂಲ ಇಲಾಖೆಯು ಅಂತಹ ಪ್ರಕರಣಗಳನ್ನು ನೇರವಾಗಿ ಸಚಿವ ಸಂಪುಟಕ್ಕೆ ಮಂಡಿಸತಕ್ಕದ್ದು

ಬೃಹತ್ ನೀರಾವರಿ ಯೋಜನಾ ನಿಯಂತ್ರಣಾ ಮಂಡಳಿಯ ಅಧಿಕಾರಿ / ಅಧಿಕಾರೇತರ ಸದಸ್ಯರುಗಳ ಪಟ್ಟಿ

ಕ್ರ. ಸಂ.	ಹೆಸರುಗಳು	ಅಧಿಕಾರಿ / ಅಧಿಕಾರೇತರ	ಪದನಾಮ
1.	ಗೌರವಾನ್ವಿತ ಮುಖ್ಯ ಮಂತ್ರಿಗಳು	ಅಧಿಕಾರೇತರ	ಅಧ್ಯಕ್ಷರು
2.	ಗೌರವಾನ್ವಿತ ಸಚಿವರು, ಜಲಸಂಪನ್ಮೂಲ ಇಲಾಖೆ	ಅಧಿಕಾರೇತರ	ಉಪಾಧ್ಯಕ್ಷರು

ಕ್ರ. ಸಂ.	ಹೆಸರುಗಳು	ಅಧಿಕಾರಿ / ಅಧಿಕಾರೇತರ	ಪದನಾಮ
3.	ಶ್ರೀ ಡಿ.ಎನ್. ದೇಸಾಯಿ, ನಿವೃತ್ತ ಕಾರ್ಯದರ್ಶಿ, ಜಲಸಂಪನ್ಮೂಲ ಇಲಾಖೆ	ಅಧಿಕಾರೇತರ	ಸದಸ್ಯರು
4.	ಶ್ರೀ ಎಸ್.ಎಂ.ಪಂಚಗಟ್ಟಿ, ನಿವೃತ್ತ ಕಾರ್ಯದರ್ಶಿ, ಜಲಸಂಪನ್ಮೂಲ ಇಲಾಖೆ	ಅಧಿಕಾರೇತರ	ಸದಸ್ಯರು
5	ಶ್ರೀ ಎನ್.ಆರ್.ವೆಂಕಟೇಶ ಪ್ರಸಾದ್,ನಿವೃತ್ತ ಕಾರ್ಯದರ್ಶಿ,ಜಲ ಸಂಪನ್ಮೂಲ.ಇ.	ಅಧಿಕಾರೇತರ	ಸದಸ್ಯರು
6.	ಶ್ರೀ ಕೆ. ಶಿವಶಂಕರ್,ನಿವೃತ್ತ ಕಾರ್ಯದರ್ಶಿ ಜಲ ಸಂಪನ್ಮೂಲ ಇಲಾಖೆ	ಅಧಿಕಾರೇತರ	ಸದಸ್ಯರು
7.	ಶ್ರೀ ಎಸ್.ಜಿ. ಚನ್ನಬಸಪ್ಪ, ನಿವೃತ್ತ ಕಾರ್ಯದರ್ಶಿ ಜಲ ಸಂಪನ್ಮೂಲ ಇಲಾಖೆ	ಅಧಿಕಾರೇತರ	ಸದಸ್ಯರು
8.	ಶ್ರೀ ಆರ್. ನಾಗೇಂದ್ರ, ನಿವೃತ್ತ ಮುಖ್ಯ ಇಂಜಿನಿಯರ್	ಅಧಿಕಾರೇತರ	ಸದಸ್ಯರು
9	ಶ್ರೀ ಆರ್. ರಿಷಿಕೇಶ್, ನಿವೃತ್ತ ಮುಖ್ಯ ಇಂಜಿನಿಯರ್	ಅಧಿಕಾರೇತರ	ಸದಸ್ಯರು
10	ಡಾ: ಎ. ಶ್ರೀಧರನ್, ನಿವೃತ್ತ ಪ್ರೊಫೆಸರು, IISc.	ಅಧಿಕಾರೇತರ	ಸದಸ್ಯರು
11	ಪ್ರಧಾನ ಕಾರ್ಯದರ್ಶಿ, ಹಣಕಾಸು ಇಲಾಖೆ.	ಅಧಿಕಾರಿ	ಸದಸ್ಯರು
12.	ಪ್ರಧಾನ ಕಾರ್ಯದರ್ಶಿ, ಜಲ ಸಂಪನ್ಮೂಲ ಇಲಾಖೆ	ಅಧಿಕಾರಿ	ಸದಸ್ಯರು
13.	ಕಾರ್ಯದರ್ಶಿ, ಕಾನೂನು ಇಲಾಖೆ	ಅಧಿಕಾರಿ	ಸದಸ್ಯರು
14.	ಕಾರ್ಯದರ್ಶಿ, ಜಲ ಸಂಪನ್ಮೂಲ ಇಲಾಖೆ	ಅಧಿಕಾರಿ	ಸದಸ್ಯರು
15.	ಮುಖ್ಯ ಇಂಜಿನಿಯರ್, ಜಲ ಸಂಪನ್ಮೂಲ ಇಲಾಖೆ	ಅಧಿಕಾರಿ	ಸದಸ್ಯರು
16.	ಉಪಕಾರ್ಯದರ್ಶಿ(ಕೆ.ಬಿ.ಜೆ.ಎನ್.) ಜಲ ಸಂಪನ್ಮೂಲ ಇಲಾಖೆ	ಅಧಿಕಾರಿ	ಸದಸ್ಯರು

ಈ ಎಲ್ಲಾ ಮಂಡಳಿಗಳು ಮತ್ತು ಸಮಿತಿಗಳ ಸಭೆಗಳಲ್ಲಿ ಸಾರ್ವಜನಿಕರಿಗೆ ಪ್ರವೇಶ ಕಲ್ಪಿಸಲಾಗುವುದಿಲ್ಲ. ನಿರ್ದಿಷ್ಟ ವಿಷಯಗಳಲ್ಲಿ ವಿಶೇಷ ಜ್ಞಾನ ಪಡೆದಿರುವಂತಹವರಿಗೆ ಮಾತ್ರ ಮಂಡಳಿಗಳ, ಕೌನ್ಸಿಲ್‌ಗಳ, ಸಮಿತಿಗಳ ಮತ್ತು ಇತರೆ ನಿಕಾಯಗಳ ಸದಸ್ಯರುಗಳಿಗೆ ಸಭೆಗಳಲ್ಲಿ ಭಾಗವಹಿಸಲು ಅವಕಾಶವಿದೆ. ಅಂತಹ ಸಭೆಗಳ ನಡವಳಿಗಳ ಅಥವಾ ಸಭೆಯ ಟಿಪ್ಪಣಿಗಳು ಸಾರ್ವಜನಿಕರಿಗೆ ಲಭ್ಯವಾಗುವುದಿಲ್ಲ.

(9) ಅಧಿಕಾರಿ / ಸಿಬ್ಬಂಧಿಯ ಮಾಸಿಕ ಸಂಭಾವನೆ ಮತ್ತು ಸೂಚಿ:

ಕ್ರ. ಸಂ.	ಅಧಿಕಾರಿ / ಸಿಬ್ಬಂಧಿಯ ಹೆಸರು	ಪದನಾಮ	ವೇತನ ಶ್ರೇಣಿ	ಒಟ್ಟು ವೇತನ	ವಿಳಾಸ	
					ಕಛೇರಿ	ಮನೆ
ಪ್ರಧಾನ ಕಾರ್ಯದರ್ಶಿ						
1.	ಡಿ. ಸತ್ಯಮೂರ್ತಿ	ಪ್ರಧಾನ ಕಾರ್ಯದರ್ಶಿ	67,000–79,000	1,16,229	ನಂ. 306, ಜಲಸಂಪನ್ಮೂಲ ಇಲಾಖೆ, 3ನೇ ಮಹಡಿ, ವಿಕಾಸ ಸೌಧ, ಬೆಂಗಳೂರು.	ಬಿ–34, 4ನೇ ಬಿ ಕ್ರಾಸ್, ಎಸ್‌ಎಫ್‌ಎಸ್ ಹೌಸ್, ಹೊಸ ಯಲಹಂಕ ಸ್ಯಾಟಲೈಟ್ ಟೌನ್, ಬೆಂ.–64, ದೂ:(ಮನೆ) 28566162 ಇಮೇಲ್:satyamurthy @gmail.com

ಕ್ರ. ಸಂ.	ಅಧಿಕಾರಿ / ಸಿಬ್ಬಂಧಿಯ ಹೆಸರು	ಪದನಾಮ	ವೇತನ ಶ್ರೇಣಿ	ಒಟ್ಟು ವೇತನ	ವಿಳಾಸ	
					ಕಛೇರಿ	ಮನೆ
2.		ಆಪ್ತ ಸಹಾಯಕರು			ನಂ. 307, ಜಲಸಂಪನ್ಮೂಲ ಇಲಾಖೆ, 3ನೇ ಮಹಡಿ, ವಿಕಾಸ ಸೌಧ, ಬೆಂಗಳೂರು.	
3.	ಸಿ.ವಿ. ನಾಗೇಶ್	ಪತ್ರಾಂಕಿತ ಸಹಾಯಕರು	11,400–21,600	27,747		4072, 3ನೇ ಮೇನ್, 10ನೇ ಕ್ರಾಸ್, ಗಾಯತ್ರಿನಗರ, ಬೆಂ–21.
4	ಎ.ಎಂ. ದೇವಕಿ	ಪತ್ರಾಂಕಿತ ಸಹಾಯಕರು	11,400–21,600	25,143		5249, ಜೆಪಿಬಿಎ, 5ನೇ ಬ್ಲಾಕ್, ಸುಂಕದಕಟ್ಟೆ, ಬೆಂ–91.
5.	ಕೆ. ಲೋಕೇಶ್	ಸಹಾಯಕ	8,000–14,800	15,373		88, ಮತ್ತಪ್ಪನಪಾಳ್ಯ, 9ನೇ ಕ್ರಾಸ್, 10ನೇ ಮೇನ್, ಇಂದಿರಾನಗರ, ಬೆಂಗಳೂರು.
6.	ಟಿ.ಸಿ. ರಾಜೇಶ್	ದಲಾಯತ್	4,800–7,275	9,580		23, ಹಾನೊರ್‌ಪೇಟ್, ಬಜಾರ್ ಸ್ಟ್ರೀಟ್, ವಿವೇಕ್‌ನಗರ್‌ಪೋಸ್ಟ್, ಬೆಂ–47

ಕ್ರ ಸಂ	ಅಧಿಕಾರಿ / ಸಿಬ್ಬಂಧಿಯ ಹೆಸರು	ಪದನಾಮ	ವೇತನ ಶ್ರೇಣಿ	ಒಟ್ಟು ವೇತನ	ವಿಳಾಸ	
					ಕಛೇರಿ	ಮನೆ
ಕಾರ್ಯದರ್ಶಿ						
1.	ಪಿ.ಎನ್.ಶ್ರೀನಿವಾಸಾ ಚಾರಿ	ಕಾರ್ಯದರ್ಶಿ (ಪ್ರಭಾರ)	37,400–67,000	1,04,252	ನಂ.305, ಜಲಸಂಪನ್ಮೂಲ ಇಲಾಖೆ, 3ನೇ ಮಹಡಿ, ವಿಕಾಸ ಸೌಧ, ಬೆಂಗಳೂರು.	73, ಸಿ/16, 'ಗೋವಿಂದ' 5ನೇ ಮೇನ್, ಭೂಪಸಂದ್ರ, ಸಂಜಯನಗರ ಪೋಸ್ಟ್ ಆಫೀಸ್ ರೋಡ್, ಬೆಂ–94
2.	ಟಿ.ವಿ. ಸುನಂದಮ್ಮ,	ಶೀಘ್ರಲಿಪಿಗಾರ್ತಿ	8,825–16,000	19,559	ನಂ.304, ಜಲಸಂಪನ್ಮೂಲ ಇಲಾಖೆ, 3ನೇ ಮಹಡಿ, ವಿಕಾಸ ಸೌಧ, ಬೆಂಗಳೂರು.	ನಂ.21, ಸುಸ್ಮಿತ ನಿಲಯ, 1ನೇ ಕ್ರಾಸ್, ಅನುಭವ ನಗರ, ನಾಗಸಂದ್ರ ರಸ್ತೆ, ಬೆಂ–72

ಕ್ರ ಸಂ	ಅಧಿಕಾರಿ / ಸಿಬ್ಬಂಧಿಯ ಹೆಸರು	ಪದನಾಮ	ವೇತನ ಶ್ರೇಣಿ	ಒಟ್ಟು ವೇತನ	ವಿಳಾಸ	
					ಕಛೇರಿ	ಮನೆ
